ಅಚಲ

ತಿಂಗಳ ಪತ್ರಿಕೆ

ಮೇ - 2004

ಒಳಗೇನಿದೆ

- 'ತಾಯಿ-ಮಗ' ಒಂದು ಆಲೋಚನೆ

  - ಡಾ॥ ಗೀತಾ ಪಿ.ಎಸ್.

- ಟಿ.ವಿ. ಧಾರಾವಾಹಿ ಮತ್ತು ಜಾಹೀರಾತುಗಳು ಸಾರುತ್ತಿರುವ ಮೌಲ್ಯಗಳು

  - ಶಾಂತಾ ನಾಗರಾಜ್

- ಹೆಣ್ಣನ್ನು ಹರಾಜು ಹಾಕಿದ ಭೂಪರು

  - ಶತಭಿಷ

ಜಾಗೃತಿ

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ, ಬೆಂಗಳೂರು

ಅಚಲ

ಸಂಪುಟ - 19 ಸಂಚಿಕೆ : 5

ಸಂಪಾದಕ ಮಂಡಲಿ

ಎನ್. ಗಾಯತ್ರಿ

ನೇಮಿಚಂದ್ರ, ದೇವಿ,

ಶಾಂತಾನಾಗರಾಜ್

ಹೆಚ್. ಎನ್: ಗೀತಾ

ಹೇಮಲತಾ ಮಹಿಷಿ

ಪ್ರಕಾಶಕರು

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ,

ಬೆಂಗಳೂರು

ಚಂದಾ ಹಣವನ್ನು ಚೆಕ್‌ನಲ್ಲಿ ಕಳುಹಿಸುವವರು ರೂ. 10 ಬ್ಯಾಂಕ್ ಕಮೀಷನ್ ಸೇರಿಸಿ ಕಳುಹಿಸಬೇಕು. ಎಂ. ಓ. ಫಾರ್ಮಿನ ಕೊನೆಯ ಭಾಗದಲ್ಲಿ ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ನಮೂದಿಸಬೇಕು. ಬದಲಾದ ವಿಳಾಸವನ್ನು ದಯವಿಟ್ಟು ಬರೆದು ತಿಳಿಸಿ.

Achala - Edited by
Dr. N. Gayathri

Published by
Dr. G. Ramakrishna on behalf of Jagruthi Mahila Adhyayana Kendra

Printed at
Lipi Mudrana
Bangalore - 560 004

ಆತ್ಮೀಯರೆ,

ಕಳೆದ 19 ವರ್ಷಗಳಿಂದಲೂ ತಾವುಗಳು ಪ್ರೀತಿ, ಅಭಿಮಾನದಿಂದ ಅಚಲ ಪತ್ರಿಕೆಯನ್ನು ನಿಮ್ಮದಾಗಿಸಿಕೊಂಡು ಪೋಷಿಸುತ್ತಾ ಬಂದಿರುತ್ತೀರಿ. ಮಹಿಳಾ ಚಳುವಳಿಯ ಮತ್ತು ಸಂಶೋಧನೆಯ ಕ್ಷೇತ್ರದಲ್ಲಿ ಇನ್ನೂ ಬೆಟ್ಟದಷ್ಟು ಕೆಲಸವಾಗಬೇಕಿದೆ. ಈ ಮಹತ್ತರ ಕಾರ್ಯದಲ್ಲಿ ನಾವೆಲ್ಲರೂ ಒಟ್ಟಾಗಿ ಶ್ರಮಿಸಬೇಕಿದೆ. ನೀವೂ ಅಚಲ ಪತ್ರಿಕೆಯನ್ನು ನಿಮ್ಮ ವಿಚಾರಗಳ ವೇದಿಕೆಯನ್ನಾಗಿ ಮಾಡಿಕೊಳ್ಳಿ ಮತ್ತು ಪತ್ರಿಕೆಯ ಪ್ರಸಾರವನ್ನು ಹೆಚ್ಚಿಸುವಲ್ಲಿ ನೆರವಾಗಿ.

ಯಾವುದೇ ವಿವರಗಳನ್ನು ಬರೆಯದ ಚಂದಾಹಣವು ಹಲವಾರು ಎಂ.ಓ ಗಳಲ್ಲಿ ನಮಗೆ ತಲುಪಿದೆ. ಚಂದಾದಾರರು ದಯವಿಟ್ಟು ಎಂ.ಓ ಫಾರ್ಮಿನ ಹಿಂಭಾಗದಲ್ಲಿ ವಿಳಾಸವನ್ನು ಬರೆಯಿರಿ.

ಅಚಲದ ಚಂದಾ ಬದಲಾಗಿದೆ

ವಾರ್ಷಿಕ ಚಂದಾ - ರೂ. 50/- (ವ್ಯಕ್ತಿಗಳಿಗೆ)

ರೂ. 100/- (ಸಂಸ್ಥೆಗಳಿಗೆ)

ಅಜೀವ ಚಂದಾ - ರೂ. 300/- (ವ್ಯಕ್ತಿಗಳಿಗೆ)

ರೂ. 400/- (ಸಂಸ್ಥೆಗಳಿಗೆ)

ಅಚಲ ವಿಳಾಸ

108, ಸ್ಕೈಲೈನ್ ಸುರಭಿ, 14-ಪಿ, ವಿದ್ಯಾಪೀಠ ರಸ್ತೆ
ಬನಶಂಕರಿ 3ನೇ ಹಂತ, ಬೆಂಗಳೂರು - 560 085

ಸಂಪಾದಕೀಯ

ಕ್ಷೀಣವಾದ ಮಹಿಳಾ ಕಾಳಜಿಗಳು

ರಾಜ್ಯದಲ್ಲಿ ವಿಧಾನಸಭಾ ಚುನಾವಣೆಗಳು ಮುಗಿದು ಯಾರೊಬ್ಬರೂ ಸ್ವತಃ ಏಕಾಂಗಿಯಾಗಿ ಅಧಿಕಾರ ರಚಿಸಲಾಗದಂತಹ ಸ್ಥಿತಿ ನಿರ್ಮಾಣವಾಗಿದೆ. ಕೇಂದ್ರದಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಮತದಾರನು ಕೋಮುವಾದದ ವಿರುದ್ಧ ಮತ ನೀಡಿ ಯಾವ ಬಣ್ಣದ ಜಾಹಿರಾತಿಗೂ ತಾನು ಮೂರ್ಖನಂತೆ ಬಗ್ಗುವವನಲ್ಲ ಎಂಬುದನ್ನು ಸಾಬೀತು ಪಡಿಸಿದ್ದಾನೆ. ಆದರೆ ಈ ಎರಡೂ ಚುನಾವಣೆಗಳಲ್ಲಿ ರಾಜ್ಯದ ರಾಜಕೀಯದಲ್ಲಿ ಮಹಿಳೆಯರ ಪ್ರಾಬಲ್ಯ ಎಷ್ಟು ಕಡಿಮೆಯಿದೆ ಎಂಬುದು ಸ್ಪಷ್ಟವಾಗಿದೆ. ಮಹಿಳೆಯರ ಕಾಳಜಿಗಳಿಗಂತೂ ಈ ಚುನಾವಣೆಗಳು ಎಳ್ಳಷ್ಟು ಗಮನ ಕೊಟ್ಟಿಲ್ಲವೆನ್ನುವುದು ದುಃಖದ ಸಂಗತಿ.

224 ಸ್ಥಾನಗಳನ್ನು ಹೊಂದಿರುವ ರಾಜ್ಯ ವಿಧಾನಸಭೆಯಲ್ಲಿ 149 ಮಹಿಳೆಯರು ಚುನಾವಣಾ ಕಣದಲ್ಲಿದ್ದರು. ಆದರೆ ಅದರಲ್ಲಿ ಚುನಾಯಿತರಾದವರು ಕೇವಲ ಆರು ಮಂದಿ. ಚುನಾವಣೆಗೆ ಸ್ಪರ್ಧಿಸುವಾಗಲೂ ಈ ಬಹಳಷ್ಟು ಮಹಿಳೆಯರು ಮಹಿಳೆಯರ ಪ್ರತಿನಿಧಿಗಳಾಗಿ ವರ್ತಿಸುವುದಿರಲಿ, ಜನ ಪ್ರತಿನಿಧಿಗಳಾಗಿಯೇ ಮಹಿಳೆಯರ ಕಾಳಜಿಗಳ ಬಗೆಗೆ ಒತ್ತು ಕೊಡಲಿಲ್ಲ. ಗತಿಸಿದ ಪತಿಯರ ಸಾಧನೆಯ ಆಧಾರದ ಮೇಲೆ ಅನುಕಂಪದ ಅಲೆಯಲ್ಲಿ ತೇಲಿ ವಿಜಯಗಳಿಸಿದ ವಿಜೇತರು ಸೇರಿದ್ದಾರೆ. ಅಧಿಕಾರದ ಸೂತ್ರ ಹಿಡಿದಿದ್ದು ಜನ ಸಾಮಾನ್ಯರ ಆಶೋತ್ತರಗಳಿಗೆ ಸ್ಪಂದಿಸದೇ ಹೋದ ಸಚಿವೆಯರು, ಮಾಜಿ ಸಚಿವೆಯರು ಚುನಾವಣೆಯಲ್ಲಿ ಸೋತದ್ದು ಅವರ ರಾಜಕಾರಣದ ಶೈಲಿಗೆ ಹಿಡಿದ ಕೈಗನ್ನಡಿ.

ಆರಂಭದಲ್ಲಿ ಲೋಕಸಭೆಯ ನೇತೃತ್ವವನ್ನು ಮಹಿಳೆಯೇ ವಹಿಸಿ ಬಿಡುವಳೆಂಬ ಭ್ರಮೆಯನ್ನು ಹುಟ್ಟಿಸಿದ ಸಂದರ್ಭ ಬದಲಾಗಿ, ಕೊನೆಗೆ ಏಳು ಮಂದಿ ಮಹಿಳೆಯರು ಸಚಿವ ಸ್ಥಾನ ಪಡೆದದ್ದು ಸ್ವಾಗತಾರ್ಹವಾದರೂ, ಇವರು ಮಹಿಳಾ ಪರ ಕಾಳಜಿಗಳನ್ನು ಎಷ್ಟರ ಮಟ್ಟಿಗೆ ಪ್ರತಿನಿಧಿಸಬಲ್ಲರು ಎಂಬುದನ್ನು ಕಾದು ನೋಡಬೇಕಾಗಿದೆ. ಈ ಬಾರಿ ಚುನಾವಣೆಗಳಲ್ಲಿ ಮಹಿಳೆಯರ ಕಾಳಜಿಗಳು ಸಂಪೂರ್ಣವಾಗಿ ನಾಪತ್ತೆಯಾದದ್ದು ಅತ್ಯಂತ ದುಃಖದ ವಿಷಯ. ಚುನಾವಣಾ ಪ್ರಚಾರಗಳಲ್ಲಿ ಗಂಭೀರ ವಿಷಯಗಳು ಚರ್ಚೆಯಾಗುವುದಕ್ಕಿಂತ ಹುಸಿ ಆಶ್ವಾಸನೆಗಳು, ವ್ಯಕ್ತಿ ನಿಂದೆ, ಪರಸ್ಪರ ಟೀಕಾ ಪ್ರಹಾರಗಳು ಆದ್ಯತೆ ಪಡೆದದ್ದು ಕೀಳು ಮಟ್ಟದ ರಾಜಕೀಯವಾಗಿತ್ತು. ಸೋನಿಯಾಗಾಂಧಿಯವರ ವಿದೇಶೀ ಮೂಲವನ್ನು ಚುನಾವಣಾ ವಿಷಯವಾಗಿ ಮಾಡಿಕೊಂಡ ಪಕ್ಷಗಳಿಗೆ ಈ ದೇಶದ ಬಹುಸಂಖ್ಯಾತ ಮಹಿಳೆಯರ ನೋವು ಸಂಕಟಗಳು ಕಣ್ಣ ಮುಂದೆ ಬರಲಿಲ್ಲ. ಮಹಿಳಾ ಮೀಸಲಾತಿಯ ವಿಷಯವಂತೂ ಎಂದಿನಂತೆ ಈ ಬಾರಿ ಚುನಾವಣಾ ಪ್ರಚಾರದಲ್ಲಿ ಪ್ರಾಮುಖ್ಯತೆ ಪಡೆಯಲಿಲ್ಲ.

ಈ ದೇಶದಲ್ಲಿ ಹೆಣ್ಣಿನ ಮೇಲೆ ನಡೆಯುವ ದೌರ್ಜನ್ಯಗಳು ಹಲವು ರೀತಿ, ಹಲವು ಬಗೆಯಲ್ಲಿವೆ. ಆದರೆ ಹೊಸದೊಂದು ದೌರ್ಜನ್ಯವನ್ನು ಈ ಬಾರಿಯ ಚುನಾವಣೆ ಕಂಡಿತು. ಚುನಾವಣೆಯ ಆಮಿಷಕ್ಕೆ ಸೀರೆ ಹಂಚುವ ಪ್ರಕ್ರಿಯೆಯ ನೂಕು ನುಗ್ಗಲಿನಲ್ಲಿ ಇಪ್ಪತ್ತು ಮಹಿಳೆಯರು ಪ್ರಾಣ ತೆತ್ತದ್ದು ನಿಜಕ್ಕೂ ನೋವಿನ ಸಂಗತಿ. ಇದೂ ಕೂಡ ಚುನಾವಣಾ ಪ್ರಚಾರಕ್ಕೆ ಸಾಧನವಾಗುವ ವಿಷಯವಾಯಿತೇ ಹೊರತು, ಮಹಿಳಾ ಸಂಘಟನೆಗಳನ್ನು ಹೊರತು ಪಡಿಸಿ ಮಹಿಳಾ ರಾಜಕಾರಣಿಗಳು ಸ್ಪಂದಿಸಿದ್ದು ತೀರ ಕಡಿಮೆಯೇ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಸುಷ್ಮಾ ಸ್ವರಾಜ್, ಉಮಾಭಾರತಿಯಂತಹ ರಾಜಕಾರಣಿಗಳು ಸೋನಿಯಾ ಬಗ್ಗೆ ಆಡಿದ ಮಾತುಗಳು, ನಡೆದುಕೊಂಡ ರೀತಿ ಯಾವ ಫ್ಯಾಸಿಸ್ಟ್ ಮನೋಭಾವಕ್ಕೂ ಕಡಿಮೆಯಿಲ್ಲ. ಇವರೆಲ್ಲಾ ಅಧಿಕಾರದಲ್ಲಿ ಮುಂದುವರಿದರೆ ಈ ದೇಶದ ಗತಿ ಏನಾಗಿಬಿಡಬಹುದಿತ್ತು ಎಂದು ಯಾರಾದರೂ ಊಹಿಸಬಹುದು. ಬಣ್ಣದ ಬೆಡಗಿನ ತಾರೆಗಳು ಈ ದೇಶದ ರಾಜಕೀಯ ಲೋಕದಲ್ಲಿ ಮಿನುಗಲು ಹೊರಟು, ಮಿನುಗಲಾಗದೇ ಹೋದದ್ದು ಈಗ ಇತಿಹಾಸ.

ಈಗ ಕೇಂದ್ರದ ಕಾಂಗ್ರೆಸ್ ಸರ್ಕಾರವನ್ನು ಬೆಂಬಲಿಸಲು ಹೊರಟಿರುವ ಎಡಪಕ್ಷಗಳು ಮಹಿಳಾ ಮೀಸಲಾತಿಯ ಬೇಡಿಕೆಯನ್ನು ಸಾಮಾನ್ಯ ಕಾರ್ಯಸೂಚಿಯ ಒಂದಂಶ ಮಾಡಬೇಕೆಂದು ಸೂಚಿಸಿವೆ. ಸಂಯುಕ್ತ ಪ್ರಗತಿಪರ ಮೈತ್ರಿಕೂಟವು ಈಗ ಸದ್ಯಕ್ಕೆ ಇದನ್ನು ಒಪ್ಪಿಕೊಂಡಿದೆಯಾದರೂ ಹಿಂದೆ ಮಹಿಳಾ ಮೀಸಲಾತಿಯ ಪರವಾಗಿ ಮಾತನಾಡಿದ ಪಕ್ಷಗಳು ಈಗೇನು ಮಾಡುವುದು ಎಂಬುದನ್ನು ಕಾದು ನೋಡಬೇಕಾಗಿದೆ. ಮೀಸಲಾತಿಯನ್ನು ವಿರೋಧಿಸುವವರು ಈಗಲೂ ಅಧಿಕಾರದ ಭಾಗವಾಗಿರುವಾಗ ಸರ್ಕಾರದ ಸುಭದ್ರತೆಯ ನೆಪ ಮಹಿಳಾ ಮೀಸಲಾತಿಗೆ ವಿರುದ್ಧವಾಗಿ ಕಾರ್ಯನಿರ್ವಹಿಸುವುದೇ ಎಂಬುದು ದೊಡ್ಡ ಪ್ರಶ್ನೆಯಾಗಿದೆ. ಎಲ್ಲ ಪಕ್ಷಗಳ ರಾಜಕೀಯ ಸಂಕಲ್ಪ 'ಮಹಿಳಾ ಮೀಸಲಾತಿ ಮಸೂದೆ'ಯ ವಿಷಯದಲ್ಲಿ ಏನಾಗಬಹುದು?- ಕಾದು ನೋಡೋಣ.

- ಎನ್. ಗಾಯತ್ರಿ

'ತಾಯಿ-ಮಗ' ಒಂದು ಆಲೋಚನೆ

- ಡಾ|| ಗೀತಾ ಪಿ.ಎಸ್.

ಪ್ರತಿಯೊಂದು ಸಂಸ್ಕೃತಿಯೂ ತನ್ನೊಳಗಿನ ವಿವಿಧ ಬಂಧುತ್ವಗಳ ಸಂಬಂಧದ ಬಿಗಿತ - ತುಡಿತಗಳನ್ನು ತನ್ನದೇ ಆದ ರೀತಿಯಲ್ಲಿ ನಿಯಂತ್ರಿಸುತ್ತದೆ. ನಮ್ಮ ನಮ್ಮ ಭಾವನೆಗಳಲ್ಲಿ ನಾವೆಷ್ಟು ಸ್ವತಂತ್ರರು ಎಂದು ಭ್ರಮಿಸಿಕೊಂಡರೂ, ನಮಗೇ ಅರಿವಿಲ್ಲದಂತೆ ಅವುಗಳ ನಿಯಂತ್ರಣದ ಸೂತ್ರಗಳು ನಮ್ಮ ಸಮಾಜ, ಸಂಸ್ಕೃತಿಯ ಕೈಲಿರುತ್ತವೆ. ಇದಕ್ಕೆ ತಾಯಿ-ಮಗನ ಸಂಬಂಧವೂ ಹೊರತಾಗಿಲ್ಲ. ತಾಯಿಯಾದವಳು ಹೇಗಿರಬೇಕು? ಅವಳಿಂದ ಏನನ್ನು ನಿರೀಕ್ಷಿಸಲಾಗುತ್ತದೆ? 'ಮಗ' ಎಂದರೆ ಎಂಥವನಾಗಬೇಕು? ಅವನ ಸ್ವರೂಪವೇನು - ಎಂಬೆಲ್ಲ ಅಂಶಗಳನ್ನೂ ನಮ್ಮ ಸಮಾಜ ನಮಗೆ ಹುಟ್ಟಿದಂದಿನಿಂದ ತಿಳಿಸಿಕೊಡುತ್ತಾ ಬರುತ್ತದೆ. ಆದ್ದರಿಂದ ತಾಯಿಯಾದಾಗ ಹೆಣ್ಣು ತಾನು ಸ್ವತಃ ತನ್ನನ್ನು ಆ ಸ್ಥಾನದಲ್ಲಿ ಬುದ್ಧಿ ಪೂರ್ವಕವಾಗಿ ಸಂಯೋಜಿಸಿಕೊಳ್ಳುವುದಕ್ಕಿಂತ ಹೆಚ್ಚಾಗಿ ಈಗಾಗಲೇ ಗೊತ್ತಿರುವ ಸಾರ್ವತ್ರಿಕ ಆಕರದಲ್ಲಿ ತನ್ನನ್ನು ತುಂಬಿಸಿಕೊಳ್ಳುತ್ತಾಳೆ. ಮಗನಾದರೂ ಅಷ್ಟೆ ಹೀಗೆ ಸಂಸ್ಕೃತಿಯ ಮಾದರಿಗಳು ಮುಂದುವರಿಯುತ್ತಾ ಹೋಗುತ್ತವೆ.

ತಾಯಿ-ಮಗನ ಸಂಬಂಧ ಆದಿಮವಾಗಿದ್ದು, ಬದುಕಿನ ಗಾಢ ಸಂಬಂಧಗಳಲ್ಲಿ ಒಂದೆಂಬುದು ನಿರ್ವಿವಾದವಾದರೂ, ಅದರ ಸ್ವರೂಪ ಎಷ್ಟೋ ವೇಳೆ ಅತಿರಂಜಿತವಾಗಿ ನಮ್ಮ ಸಂಸ್ಕೃತಿಯಲ್ಲಿ ನಿರೂಪಿತವಾಗಿರುವುದೂ ಅಷ್ಟೇ ಸತ್ಯ. ಸಾವಿರಾರು ವರ್ಷಗಳ ಸ್ಪಷ್ಟ ದಾಖಲೆ ಇರುವ ತಾಯಿ-ಮಗನ ಸಂಬಂಧದ ಸ್ವರೂಪದ ವಿವಿಧ ಮಾದರಿಗಳು ನಮ್ಮ ಮುಂದಿವೆ. ಯಶೋದಾ-ಕೃಷ್ಣರ ಮೋಹಕ ಸಂಬಂಧವಿರುವಂತೆ, ಹದ್ದು ಮೀರುವ ಮಗನನ್ನು ನಿಯಂತ್ರಿಸಲಾರದೆ ವಿಷಾದಕ್ಕೆ ಸಲ್ಲುವ ಗಾಂಧಾರಿ-ದುರ್ಯೋಧನರ ಚಿತ್ರವೂ ಇದೆ. ತಾಯಿಯನ್ನು ದೇವತೆಯಂದೇ ಪರಿಗಣಿಸಬೇಕೆಂಬ ನಮ್ಮ ನಾಡಿನಲ್ಲೇ, ತಂದೆಯ ಆಜ್ಞೆಯಂತೆ ಅವಳ ತಲೆಯನ್ನು ಕಡಿದ ಪರಶುರಾಮನ ಚಿತ್ರವೂ ಇದೆ. ಇವೆಲ್ಲ ಹಿಂದಿನ ಕಥೆಯಾಯಿತು. ಬದಲಾಗುತ್ತಿರುವ ಬದುಕಿನ ಸಂದರ್ಭದಲ್ಲಿ, ಎಲ್ಲ ಸಂಬಂಧಗಳ ಮೌಲಿಕತೆಯೂ ಸ್ವಾರ್ಥದ ಅಗ್ನಿ ಪರೀಕ್ಷೆಯಲ್ಲಿ ತನ್ನನ್ನು ಒಡ್ಡಿಕೊಂಡು ಗೆದ್ದು ನಿಲ್ಲಬೇಕಾದ ಈ ಹೊತ್ತಿನಲ್ಲಿ ತಾಯಿ-ಮಗನ ಸಂಬಂಧದ ಸ್ವರೂಪವೂ ಮರು ಪರಿಶೀಲನೀಯವಾದದ್ದು.

ನಾವೂ ಸಸ್ತನಿ ವರ್ಗಕ್ಕೆ ಸೇರಿದ ಪ್ರಾಣಿಗಳೇ ಆದರೂ, ಪ್ರಾಣಿ ಮಾತ್ರರಲ್ಲ. ಹುಟ್ಟಿದ ಕರುವೋ-ಮರಿಯೋ ಸ್ವಯಂಶಕ್ತವಾಗುವ ತನಕ ಅದಕ್ಕೆ ತಾಯಿಯ ಪೋಷಣೆ, ಆರೈಕೆ, ರಕ್ಷಣೆ. ಮರಿ ಬಲಿಷ್ಠವಾದ ಕೂಡಲೇ ತಾಯಿ ಯಾರೋ ಮಗ ಯಾರೋ, ಒಂದು ಮಟ್ಟಿಗೆ ತಂದೆಯಲ್ಲದೆ ಇತರ ಸಂಬಂಧಗಳಂತೂ ಪ್ರಾಣಿಯ ಬದುಕಿನಲ್ಲಿಲ್ಲ. ಒಂದು ಜೈವಿತ ನೆಲೆಯಲ್ಲಿ ಎಲ್ಲ ತಾಯಿ ಪ್ರಾಣಿಗಳೂ, ಎಲ್ಲಾ ಮರಿಗಳನ್ನು ಸಾಧಾರಣವಾಗಿ ಒಂದೇ ತರಹ ನಡೆಸಿಕೊಳ್ಳುತ್ತವೆ. ಪರಿಸರ ಅವುಗಳ ಪ್ರತಿಕ್ರಿಯೆಯನ್ನು ಬದಲು ಮಾಡುವುದಿಲ್ಲ. ಆದರೆ ಮನುಷ್ಯವರ್ಗದಲ್ಲಿ ಆ ಕ್ರಿಯೆ ಬೇರೆಯೇ ರೀತಿಯದ್ದು. ಅತ್ತೆಯ ಗೋಳುಕರೆಯಲ್ಲಿ ಬೇಯುತ್ತಿರುವ ಹೆಣ್ಣಿಗೆ, ಮಗುವನ್ನು ಲಾಲಿಸಲೂ ಸಮಯ ಸಿಕ್ಕದಿರಬಹುದು; ಅಜ್ಜ-ಅಜ್ಜಿಯರ ಲೋಲಪ್ತಿಯಲ್ಲಿ ಮುಳುಗಿರುವ ಮಗುವಿಗೆ ತಾಯಿಯ ಪ್ರೀತಿಯೇ ಬೇಡವೆನಿಸಬಹುದು. ಆಗ ತಾಯಿ-ಮಗನ ಪ್ರತಿ ಸಂಬಂಧವೂ ತನ್ನ ಆಳ ವಿಸ್ತಾರಗಳನ್ನು ತಾನೇ ನಿರ್ಮಿಸಿಕೊಳ್ಳುತ್ತದೆ. ಮೊದಲು ಸೂಚಿಸಿದ ಸ್ಟಿರಿಯೋಟೈಪ್ ಪಾತ್ರವೂ, ಜೀವನ ಸಂದಂರ್ಭದಲ್ಲಿ ಹುಟ್ಟಿಕೊಳ್ಳುವ ಘನ-ವಾಸ್ತವದ ರಕ್ತ-ಮಾಂಸಗಳ ಈ ಪಾತ್ರವೂ ಒಂದರೊಡನೊಂದು ಘರ್ಷಿಸುವ ಅನಿವಾರ್ಯ ಹುಟ್ಟಿಕೊಳ್ಳುತ್ತದೆ. ತಾಯಿ ಎಂದರೆ ಹೀಗಿರಬೇಕು ಎಂಬ ನಿರೀಕ್ಷೆ, ಹಾಗಿರಲಾರದ ತಾಯಿಯ ಬಗ್ಗೆ ತಿರಸ್ಕಾರ - ಇದು ಬಹು ಸ್ವಾಭಾವಿಕವಾಗಿ ನಮ್ಮಲ್ಲಿ ಬೆಳೆಯುತ್ತದೆ. ಅಂದರೆ ಸಂಬಂಧವನ್ನು ಅದರದರ ಸಹಜಶಕ್ತಿಗೆ ಬೆಳೆಯಲು ಬಿಟ್ಟು, ನೈಜಸ್ಥಿತಿಯನ್ನು ಗಂಭೀರವಾಗಿ ಅಂಗೀಕರಿಸುವುದಕ್ಕಿಂತ - ಒಂದು ಭವ್ಯವಾದ ನಿರೀಕ್ಷೆಯನ್ನಿಟ್ಟುಕೊಂಡು ಅದು ಹುಸಿಯಾದಾಗ ವ್ಯಥೆಪಡುವ ಸ್ವಭಾವ ನಮ್ಮಲ್ಲಿ ಜಾಸ್ತಿ.

ಪ್ರಸ್ತುತ, ತಾಯಿ-ಮಗನ ಸಂಬಂಧದ ಬಗ್ಗೆ ಮಾತನಾಡುವಾಗ ನಮ್ಮ ಸಾಮಾಜಿಕ ಸಂದರ್ಭದ ಹಿನ್ನೆಲೆಯಲ್ಲಿ ನಾನು ಈ ವಿಷಯವನ್ನು 2 ಹಂತಗಳಲ್ಲಿ ನೋಡ ಬಯಸುತ್ತೇನೆ.

1. ಬಾಲ್ಯದ ಹಂತದಲ್ಲಿ ತಾಯಿ ಮಗನ ಸಂಬಂಧ
2. ಮಗನ ಮದುವೆಯ ನಂತರದ ತಾಯಿ-ಮಗನ ಸಂಬಂಧ

ಕೂಡು ಕುಟುಂಬ ಪದ್ಧತಿ ಬಹುತೇಕ ಕಣ್ಮರೆಯಾಗಿದ್ದರೂ, ತಾಯಿ, ತಂದೆ, ಮಗ-ಸೊಸೆ, ಮೊಮ್ಮಕ್ಕಳು ಒಟ್ಟಾಗಿ ವಾಸಿಸುವ ಸೆಮಿ ಸಂಕೀರ್ಣ ಕುಟುಂಬಗಳು ಇನ್ನೂ ಇದ್ದೇ ಇವೆ. ಕೃಷಿ, ವಾಣಿಜ್ಯ ವ್ಯವಹಾರಗಳನ್ನು ನಡೆಸುವ ಮನೆಗಳಲ್ಲೂ ಜನ ಒಟ್ಟಾಗಿ ಇರುತ್ತಾರೆ, ಇರಬೇಕಾಗುತ್ತದೆ. ದೊಡ್ಡ ನಗರಗಳಲ್ಲಿ, ದೊಡ್ಡ ಉದ್ಯೋಗಗಳ ಹಿನ್ನೆಲೆಯಲ್ಲಿ ಮಕ್ಕಳು ಒಂದೇ ಊರಿನಲ್ಲಿದ್ದರೂ ತಾಯಿ-ತಂದೆಗಳಿಂದ ಬೇರೆಯಾಗಿ ಬದುಕುತ್ತಾರೆಯೇ ವಿನಃ ಹಳ್ಳಿಗಳಲ್ಲಿ, ಸಣ್ಣ ಊರುಗಳಲ್ಲಿ ಸಾಧಾರಣವಾಗಿ ಒಟ್ಟಾಗಿ ಬದುಕುತ್ತಾರೆ. ಹಾಗೊಂದು ವೇಳೆ ಒಟ್ಟಾಗಿ ಇರದಿದ್ದರೂ ತಾಯಿ-ಮಗನ ಸಂಬಂಧದ ಘನಿಷ್ಠತೆ ಪ್ರಶ್ನಾರ್ಹವಲ್ಲ.

ಈಗ ಬಾಲ್ಯದ ಹಂತಕ್ಕೆ ಬರೋಣ, ಮಗು ಹುಟ್ಟಿದಾಗಿಂದ ಏಕೆ, ಹುಟ್ಟುವ ಮೊದಲಿನಿಂದಲೂ ಅದರೊಂದಿಗೆ ಗಂಟು ಬೆಸೆದುಕೊಳ್ಳುವವಳು ತಾಯಿ. ಒಂದು ಮಾತಿನಲ್ಲಿ ಹೇಳುವುದಾದರೆ ನಾಳೆ ಮಗ ಏನಾಗುತ್ತಾನೋ, ಅದರ ಮೂಲರೂಪ ತಾಯಿಯ ಹೊಟ್ಟೆಯಲ್ಲೇ ಘಟಿಸುತ್ತದೆ. ಮಗನ ಆರೋಗ್ಯ, ಬೌದ್ಧಿಕತೆ, ಚಹರೆ, ಬಣ್ಣ, ಅಂಗವೈಕಲ್ಯ, ರೋಗ ಎಲ್ಲವೂ ಅಲ್ಲಿಯೇ ಕೂಡಿಕೊಳ್ಳುತ್ತದೆ. ಆಕೆ ಮಗು ಹುಟ್ಟುವ ಮೊದಲೇ ಆ ಬಗ್ಗೆ ಕನಸು ಕಾಣುತ್ತಾಳೆ. ಗಂಡು ಮಗುವಿನ ಬಗ್ಗೆ ಒಂದು ಅನಾರೋಗ್ಯಕಾರಿಯಾದ ಆಕಾಂಕ್ಷೆ, ಹೆಣ್ಣುಮಗುವಿನ ಬಗ್ಗೆ ಕ್ರೂರವಾದ ಅನಾದರವಿರುವ ನಮ್ಮ ನಾಡಿನಲ್ಲಿ ಬಹುತೇಕ ಭಾವಿ ತಾಯಿಯರು ಗಂಡುಮಗುವಿನ ಕನಸು ಕಾಣುತ್ತಾರೆ ''ಹೆಣ್ಣೋ-ಹುಣ್ಣೋ, 'ಗಂಡೋ-ಮುತ್ತಿನ ಚಂಡೋ' ''ಹೇಳ್ತಾ ಹೇಳ್ತಾ ಮಗಳು ಹೆಣ್ಣೇ ಹೆತ್ಲು'' ''ಅದೇ ಅನ್ನಕ್ ಅವಳೇ ಇಲ್ಲೆ - ಪುಳ್ಳೆ ಪೆಯರ್ ರಾಮಕೃಷ್ಣ'' (ಪೊಣ್ಣಲ್ಲ-ಪುಳ್ಳೆ) ಎಂಬಂತಹ ಗಾದೆಗಳು ನಮ್ಮ ಜನಾಂಗದ ಅನುಭವದ್ರವ್ಯದ್ದೇ. ಇಡೀ ಸಮೂಹ ತಾಯಿ, ಗಂಡುಮಗುವನ್ನು ಹಡೆಯಲಿ ಎಂಬ ಆಶಯದ ಒತ್ತಡವನ್ನು ಅವಳ ಮೇಲೆ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಹೇರುತ್ತದೆ. ಅವಳು ಒಂದು ವೇಳೆ ಮಗನನ್ನೆ ಹಡೆದಳೋ, ಕೃತಾರ್ಥಳಾದೆನೆಂಬ ಭಾವ ಭವಿಷ್ಯದ ಊರುಗೋಲನ್ನು ಪಡೆದ ಭಾವ ಅವಳಿಗೆ. ಹೆರಿಗೆಗೆ ಸಹಾಯ ಮಾಡಿಸಿದ ನರ್ಸ್ ಕೂಡ ಹೆಣ್ಣಾದರೆ ಕಡಿಮೆ, ಗಂಡಾದರೆ ಹೆಚ್ಚು ಇನಾಮನ್ನು ಒತ್ತಾಯಿಸುತ್ತಾಳೆಂದರೆ ನಮ್ಮ ಪರಿಸ್ಥಿತಿಯ ತೀವ್ರತೆ ಅರಿವಾಗಬಹುದು.

ಇಂಥ ಹಿನ್ನೆಲೆಯಲ್ಲಿ ಮಗನನ್ನು ಹೆತ್ತ ತಾಯಿ ಅದನ್ನು ಬೆಳೆಸುವ ಕ್ರಮದಲ್ಲೂ (ಎಲ್ಲ ತಾಯಂದಿರು ಎಂದು ಅರ್ಥಮಾಡಿಕೊಳ್ಳ ಬೇಡಿ, ಬಹುತೇಕ ತಾಯಂದಿರು) ಪುರುಷ ಪ್ರಧಾನತೆಯ ಮೂಲ ಸೂತ್ರಗಳನ್ನು ತನ್ನ ಅರಿವನ್ನು ಮೀರಿ ಸಹಜವಾಗಿ ಮಗುವಿನಲ್ಲಿ ಬಿತ್ತುತ್ತಾಳೆ. ಗಂಡು ಎಂತಹ ಹೊತ್ತಿನಲ್ಲೂ ಶ್ರೇಷ್ಠ, ಆವನು ಮನೆ ಕೆಲಸದಂತಹ ಕ್ಷುಲ್ಲಕ ವಿಷಯಕ್ಕೆ ಕೈ ಹಾಕಬಾರುದು, ಅತ್ತು ಹೇಡಿಯಾಗಬಾರದು, ಅವನು ವಂಶೋದ್ಧಾರಕ, ಮನೆಯ ವಾರಸುದಾರ ಹಾಗಾಗಿ ಮಗಳಿಗಿಂತ ಹೆಚ್ಚು ಕ್ಷಮಾರ್ಹ ಎಂಬ ನೆಲೆಯಲ್ಲಿ ಸಾಕುತ್ತಾಳೆ. ಇದು ಒಂದು ಮಜಲಾದರೆ, ತಾನು ಕಲಿಯಲಾರದ್ದನ್ನೆಲ್ಲ ಇವನು ಕಲಿಯಲಿ, ಚೆನ್ನಾಗಿ ಓದಿ ಒಳ್ಳೆಯ ಸಂಬಳದ ಕೆಲಸ ಹಿಡಿಯಲಿ, ತನ್ನ ಅರಕೆಗಳನ್ನೆಲ್ಲ ಪೂರೈಸುವಂಥವನಾಗಲಿ - ಒಟ್ಟಿನಲ್ಲಿ ತನ್ನ ಕನಸು ನನಸಾಗಲು ಇವನೊಂದು ವಾಹಕವಾಗಬೇಕು, ಎಂಬುದು ಮತ್ತೊಂದು ಮಜಲು ''ನನ್ನ ಮಗನಿಗೊಂದು ಒಳ್ಳೆ ಕೆಲಸ ಸಿಕ್ಕಿ ಬಿಟ್ರೆ ಸಾಕಪ್ಪ, ನಂ ಮನೆ ಗೋಳೆಲ್ಲ ಕಳ್ಯತ್ತೆ'' ಎನ್ನುವ ಎಷ್ಟೋ ತಾಯಿಯರನ್ನು ನಾವು ನೋಡುತ್ತೇವೆ, ತನ್ನ ಮಗ ಮೈಸೂರ್ ಸಿಲ್ಕ್ ಸೀರೆ ತಂದು ಕೊಡುವಂತಾಗಲಿ ಎಂದು ಕೆಳವರ್ಗದ ತಾಯಿ ಬಯಸಿದರೆ, ಅವನೊಂದು ಭವ್ಯವಾದ ಮನೆ ಕಟ್ಟಿಸಲಿ ಎಂದು ಮಧ್ಯಮ ವರ್ಗದ ಹೆಣ್ಣು ಬಯಸುತ್ತಾಳೆ. ಒಟ್ಟಿನಲ್ಲಿ ಮಗನನ್ನು ಸಾಕುವ ಹಂತದಲ್ಲೇ ನಿರೀಕ್ಷೆ ತುಂಬಿದ ಪ್ರೀತಿ, ಆತಂಕ ತುಂಬಿದ ಆಸೆ ಅವಳಿಗೆ.

ಆದರೆ ಇದು ಸಾಧ್ಯವಾಗುತ್ತದೆಯೇ ಯೋಚಿಸಬೇಕು. ನಮ್ಮ ಮಗ ಎನ್ನುವ ಮೋಹ ನಮಗಿದ್ದ ಮಾತ್ರಕ್ಕೆ ಅವನೇನು ಬೃಹಸ್ಪತಿ ಆಗಲಾರ. ಸಾಧಾರಣ ಸಾಮರ್ಥ್ಯದ ತಾಯಿ ತನ್ನ ಮಗ ಐನ್‌ಸ್ಟೇನೋ, ನ್ಯೂಟನ್ನೋ ಆಗಿಬಿಡಲಿ ಎಂಬ ಮಹತ್ವಾಕಾಂಕ್ಷೆಯ ಒತ್ತಡವನ್ನು ಹೇರಿದರು, ಅದಾಗುವುದಿಲ್ಲ, ಮಗನಿಗೂ ಅವನದೇ ಆದ ವ್ಯಕ್ತಿತ್ವ, ಇತಿ-ಮಿತಿ, ಸಾಧ್ಯತೆ ಅಸಾಧ್ಯತೆಗಳಿರುತ್ತವೆ. ನಮ್ಮ ಮಗ ಎಂದು ಹುಟ್ಟಿದ ಮಾತ್ರಕ್ಕೆ ಅವನ ವ್ಯಕ್ತಿತ್ವದ ಮೇಲೆ ನಮಗೆ ಸರ್ವಾಧಿಕಾರ ಇರುವುದು ಸಾಧ್ಯವಿಲ್ಲ ಮಕ್ಕಳು ಹುಟ್ಟುವುದು ನೈಸರ್ಗಿಕವಾದ ಬದುಕಿನ ವಿಧಾನವೇ ಹೊರತು, ತಂದೆ ತಾಯಿಯರ ಆಸೆ-ಆಕಾಂಕ್ಷೆಗಳ ಪೂರೈಕೆಗೆ ಅವು ಡಿಮಾಂಡ್ ಡ್ರಾಫ್ಟ್‌ಗಳಲ್ಲಿ ಖಲೀಲ್ ಗಿಬ್ರಾನ್ ಹೇಳುವಂತೆ ತಂದೆತಾಯಿಯರು ಭೂಮಿಗೆ ಮಕ್ಕಳನ್ನು ತರುವ 'ಟ್ರಸ್ಟಿ'ಗಳು - ಅದರ ಮೇಲೆ ಪ್ರಭುತ್ವ ಸ್ಥಾಪಿಸಬೇಕಾದವರಲ್ಲ. ಇದನ್ನು ತಾಯಿಯಾದವಳು ಚೆನ್ನಾಗಿ ಅರ್ಥಮಾಡಿಕೊಳ್ಳದಿದ್ದರೆ ಮಗನನ್ನು ಆರೋಗ್ಯಕಾರಿಯಾಗಿ ಸಾಕುವುದು ಸಾಧ್ಯವಿಲ್ಲ.

ಇಂದು ಹಿಂದಿನಂತೆ ಒಂದು ಸ್ಥಾನಬಲ ಮಾತ್ರದಿಂದಲೇ ಗೌರವಾದರಗಳು ಹುಟ್ಟುವುದಿಲ್ಲ ಎನ್ನುವುದನ್ನು ತಾಯಿಯಾದವಳು ಚೆನ್ನಾಗಿ ಅರ್ಥಮಾಡಿಕೊಳ್ಳಬೇಕು. ಮಗ ತನ್ನ ಸುತ್ತಮುತ್ತ ನೋಡುವ ಇತರ ತಾಯಂದಿರೊಂದಿಗೆ ತನ್ನ ತಾಯಿಯನ್ನು ಇಂದು ಸದಾ ತುಲನೆ ಮಾಡುತ್ತಾನೆ. ಯಾವುದೇ ಕ್ಷೇತ್ರದಲ್ಲಿ ಹಿಂದೆ ಬೀಳುವ ತಾಯಿಗೆ ಮುಲಾಜಿಲ್ಲದೆ ವಾಗ್ಬಾಣಗಳು ನಾಟುತ್ತವೆ, ''ನಿಂಗೆ ಚೆನ್ನಾಗಿ ಅಡಿಗೆ ಮಾಡಕ್ಕೆ ಬರಲ್ಲ'', ''ನಿಂಗ್ ನೀಟಾಗಿ ಇರೋಕ್ಕೆ ಗೊತ್ತಿಲ್ಲ'' ''ನಿಂಗೆ ಯಾವ ಊರು ಯಾವ ಕಡೆ ಇದೆ ಅಂತ ಗೊತ್ತಿಲ್ಲ'' ಇತ್ಯಾದಿ. ಆದ್ದರಿಂದ ಇಂದು ತಾಯಿ-ಮಗನ ಸಂಬಂಧದ ಸಾರ್ಥಕತೆಗೆ, ತಾಯಿಗೆ 'ಅರಿವು' ತುಂಬ ಅಗತ್ಯ. ಒಂದು ಮಟ್ಟದ ಜನ್ರಲ್ ನಾಲೆಜ್, ಪ್ಲೀಸಿಂಗ್ ಬಿಹೇವಿಯರ್, ಸೋಷಿಯಲ್ ಅಕ್ಸೆಪ್ಟನ್ಸ್ (ಸಾಮಾನ್ಯ ವಿಜ್ಞಾನ, ಪ್ರಿಯಕಾರಿ ನಡುವಳಿಕೆ, ಸಾಮಾಜಿಕ ಅಂಗೀಕಾರ) ಇವೆಲ್ಲವೂ ಅವಳಿಗೆ ಬೇಕು.

ಹಿಂದೆ ಸಾಂಪ್ರದಾಯಿಕವಾದ ಒಳಿತಿನಲ್ಲಿ 100% ನಂಬಿಕೆ ಇದ್ದ ಹೊತ್ತಿನಲ್ಲಿ, ಅದನ್ನು ನಂಬಿ ಮಕ್ಕಳನ್ನು ಹಾಗೇ ಬೆಳೆಸುವುದು ಸುಲಭವಿತ್ತು. ಆದರೆ ಇಂದು ತಾಯಿಗೆ ತನ್ನ ನಂಬಿಕೆಗಳೇ ಕುಂಟುವ ಹೊತ್ತಿನಲ್ಲಿ ಮಗನಲ್ಲಿ ಬೆಳೆಸಬೇಕಾದ ಮೌಲ್ಯಪ್ರಜ್ಞೆ - ಸಂಸ್ಕೃತಿ ಪ್ರಜ್ಞೆ ಅತ್ಯಂತ ಕಠಿಣತಮವಾದ ಪರೀಕ್ಷೆ. ದೈಹಿಕವಾಗಿ ಚೆನ್ನಾಗಿ ಸಾಕಬಹುದು, ಬೌದ್ಧಿಕವಾಗಿ ಒಳ್ಳೆಯ ತಯಾರಿಕೊಡಬಹುದು, ಆದರೆ ಆಂತರಂಗಿಕವಾಗಿ ಒಬ್ಬ ಒಳ್ಳೆಯ ಮಗನನ್ನು ತಯಾರು ಮಾಡುವುದು ಅತ್ಯಂತ ಕಷ್ಟದ

ಕೆಲಸ. ಹಾಗೆಂದು ಅದನ್ನು ಮಾಡದೇ ಬಿಡುವಂತಿಲ್ಲ ಮತ್ತು ತಾಯಿ ಮುಖ್ಯವಾಗಿ ಮಾಡಬೇಕಾಗಿರುವುದು ಅದೇ ಕೆಲಸವನ್ನು.

ಇದನ್ನು ಹೇಗೆ ಮಾಡಬಹುದು? ಪ್ರತಿಯೊಬ್ಬ ತಾಯಿಯೂ ತನ್ನಹಾದಿಯನ್ನು ತಾನೇ ನಡೆದು ತೋರಿಸಬೇಕು. ಮಗನಿಗೆ ಅವಳು ಕೇವಲ ಮುದ್ದಿಸುವ ಅಥವಾ ಕೇವಲ ಶಿಕ್ಷಿಸುವ ಅಥವಾ ನಿರ್ಲಕ್ಷಿಸುವ ಬಂಧುವಾಗದೆ, 'ಗೆಳತಿ' ಯಾಗಬೇಕಾದದ್ದು ಈ ಕಾಲದ ಒತ್ತಡ. ಅಂದ ಮಾತ್ರಕ್ಕೆ ಅವಳ ಪ್ರಭುತ್ವ ಕಡಿಮೆಯಾಗುತ್ತದೆಂದಲ್ಲ ''ನನಗಿಂತ ಮುಂದೆ ಮುಂದೆ ನಡೆಯಬೇಡ - ನಾನು ನಿನ್ನೊಂದಿಗೆ ಹೆಜ್ಜೆ ಹಾಕಲಾರೆ, ನನಗಿಂತ ಹಿಂದೆ ಹಿಂದೆ ನಡೆಯಬೇಡ ನನಗೆ ನಿನ್ನ ಜೊತೆ ಸಿಕ್ಕುವುದಿಲ್ಲ - ದಯವಿಟ್ಟು ನನ್ನೊಂದಿಗೆ ಹೆಜ್ಜೆ ಹಾಕು'' ಎಂಬ ಮಾತಿದೆ. ತಾಯಿ ಬಾಲ್ಯದಲ್ಲಿ ಮಗನೊಂದಿಗೆ ಹಾಗೆ ಹೆಜ್ಜೆ ಹಾಕಬೇಕಾಗುತ್ತದೆ. ತನ್ನ ಎಲ್ಲ ಹೊಣೆಗಾರಿಕೆಯ ನಡುವೆಯೂ ತಾನು ಮಗನನ್ನು ಅವನಿಗಾಗಿ ಪ್ರೀತಿಸುತ್ತೇನೆ, ರಕ್ಷಿಸುತ್ತೇನೆ, ಅವನು ತನಗೆ ಮುಖ್ಯ, ಅವನ ಭಾವಗಳನ್ನು ತಾನು ಗೌರವಿಸುತ್ತೇನೆ ಎಂಬ ಅನುಭವವನ್ನು ಅವನಿಗೆ ತಂದು ಕೊಡಬೇಕಾಗುತ್ತದೆ. ಸಿಕ್ಕಿದ್ದಕ್ಕೆಲ್ಲ ಶಿಕ್ಷಿಸದೆ, ಅಥವಾ ಅತಿ ಮುಚ್ಚಟೆ ಮಾಡದೆ, ಅವನ ವ್ಯಕ್ತಿತ್ವದ ಸ್ವಾತಂತ್ರ್ಯದಲ್ಲಿ ಅವನು ಬೆಳೆಯಲು ಈಕೆ ಸಹಕರಿಸಬೇಕು. ಇವಳ ನಿಗದಲ್ಲಿ ಅವನು ಬೆಳೆಯಬೇಕು. ಯಾವುದರ ಬಗೆಗಿನ ಅತಿ ಒತ್ತಡಗಳೂ ಒಳ್ಳೆಯ ಪರಿಣಾಮ ಬೀರುವುದಿಲ್ಲ ಕೆಲಸ, ಹಣ, ಕಾಲ, ವ್ಯಕ್ತಿತ್ವ, ಶುಚಿತ್ವ ಇವುಗಳ ಬಗೆಗೆ ಬಾಲ್ಯದಲ್ಲಿ ಮೂಡದ ಅರಿವು - ಮತ್ತೆಂದೂ ಮೂಡುವುದಿಲ್ಲ. ಜಗತ್ತನ್ನು ಪ್ರೀತಿಸಬಲ್ಲ ಜಗತ್ತಿನ ಪ್ರೀತಿಯನ್ನು ಪಡೆಯಬಲ್ಲ ಸದ್‌ವ್ಯಕ್ತಿಯನ್ನಾಗಿ ಆಕೆ ಮಗನನ್ನು ಸಾಕಬೇಕು. ಅದರಲ್ಲೂ ವಿಶೇಷವಾಗಿ ತಾಯಿ 'ಹೆಣ್ಣಿ'ನ ಪರಿಕಲ್ಪನೆಯನ್ನು ಹೇಗೆ ಮೂಡಿಸಿರುತ್ತಾಳೋ, ನಾಳಿನ ಮಗನ ಬದುಕಿಲ್ಲಿ ತನ್ನ ಹೆಂಡತಿಯನ್ನು ನೋಡುವಾಗ ಅದು ದಟ್ಟ ಪ್ರಭಾವ ಬೀರುತ್ತದೆ. ತನ್ನ ಗಂಡು-ಹೆಣ್ಣು ಮಕ್ಕಳಲ್ಲಿ ಪಕ್ಷಪಾತ ಮಾಡಿ ಬೆಳೆಸುವ ತಾಯಿಯ ಮಗ, ಮುಂದೆಂದೂ ಹೆಣ್ಣನ್ನು ಗೌರವದಿಂದ ನೋಡಲಾರ. ಅಂದರೆ ತಾಯಿ ತಾನು ತನ್ನ ಭಾವನೆಗಳಲ್ಲಿ ಸ್ವತಂತ್ರಳಾಗದೆ, ಸ್ವತಂತ್ರ ವ್ಯಕ್ತಿತ್ವದ ಮಗನನ್ನು ಬೆಳೆಸಲಾರಳು. ಹೀಗಾಗಿ ಜವಾಬ್ದಾರಿಯುತ ತಾಯಿ ಒಂದು ಆರೋಗ್ಯಕಾರಿ ಆದ ಹಿಡಿತ ಮತ್ತು ಬಿಡುತೆಗಳ ನಡುವೆ ಮಗನನ್ನು ಸಾಕಬೇಕು.

ಹಾಗೆ ಬೆಳೆಸಿದಳೆಂದೇ ಇಟ್ಟುಕೊಳ್ಳೋಣ. ಅಂತಹ ಒಳ್ಳೆಯ ಮಗ ತಾಯಿಯೊಂದಿಗೆ ತುಂಬ ತೆರೆದ ಸಂಬಂಧವನ್ನೇ ಹೊಂದಿರುತ್ತಾನೆ. ಆದರೆ ಆತನ ಮದುವೆಯ ನಂತರ ತಾಯಿ ತನ್ನ ಜಾಗದ ಅರಿವು ನಿಶ್ಚಿತವಾಗಿರಬೇಕು. ಏಕೆಂದರೆ ಮದುವೆಯ ನಂತರ ಮಗ ತಾಯಿಯೊಂದಿಗೆ ಹಿಂದಿನಂತೆಯೇ ಇರುವುದು ಅಸಾಧ್ಯ. ತುಂಬ ಸತ್ಯವಾಗಿ ಹೇಳಬೇಕೆಂದರೆ, ತಾಯಿಗೆ ಸರಿಯಾಗಿ ಜೊತೆಯಾಗ ಬೇಕಾದವನು ಅವಳ ಗಂಡ. ಅವಳ ಅದೃಷ್ಟ ಚೆನ್ನಾಗಿದ್ದು ಅವನು 'ಸಖ'ನಾಗಿದ್ದರೆ, ಮಗನ ಮೇಲೆ ತಾಯಿಯ ನಿರೀಕ್ಷೆ ಕಡಿಮೆ ಇರುತ್ತದೆ. ಇಲ್ಲದಿದ್ದರೆ ತನ್ನ ಬದುಕಿನ ಬಹುವಿಧದ ಅರಕೆಯನ್ನು ಭಿನ್ನ ಭಿನ್ನ ಆಯಾಮದಲ್ಲಿ ಆಕೆ ಮಗನಿಂದ ತುಂಬಿಕೊಳ್ಳಲು ನೋಡುತ್ತಾಳೆ. ಈ ತನಕ ಹಾಗೆ ಸಾಧ್ಯವಾದದ್ದು ಮಗನ ಮದುವೆಯ ನಂತರ ಅಸಾಧು-ಅಸಾಧ್ಯ. ಈಗ ಮಗನಿಗೆ ತಾಯಿ ಜೀವನದ ಒಂದು ಭಾಗ, ಹೆಂಡತಿ ಜೀವನ. ಮಗನ ತೋಳಿಗೆ ಆತುಕೊಳ್ಳಲು ಸೊಸೆ ಇರುವಾಗ ತಾಯಿ ತಾನು ಆ ಸ್ಥಾನಕ್ಕೆ ಹೋಗಬಾರದು. ತನ್ನ ಗಂಡ ತನ್ನ ಅತ್ತೆಯೊಂದಿಗೆ ಹೇಗಿರಲಿ ಎಂದು ತಾನು ಅಪೇಕ್ಷಿಸಿದ್ದಳೋ, ಮಗನ ಮದುವೆಯ ನಂತರ ತನ್ನ ಮತ್ತು ಮಗನ ಸಂಬಂಧದ ಬಗ್ಗೆ ಅದಕ್ಕಿಂದ ಒಂದು ಹುಲ್ಲು ಕಡ್ಡಿಯನ್ನೂ ಹೆಚ್ಚು ನಿರೀಕ್ಷಿಸಬಾರದು. ಮೊದಲಿನಂತೆ ಮಗ ಎಂದರೆ ಈಗ ಮಗ ಮಾತ್ರನಲ್ಲ, ಸೊಸೆಯ ಗಂಡನೂ ಹೌದು. ''ತಾನು ಅವನು ಹುಟ್ಟುವ ಮೊದಲಿಂದಲೂ ಬಲ್ಲವಳು, ಸಾಕಿ ದೊಡ್ಡದು ಮಾಡಿದವಳು. ಸೊಸೆ ಇಂದು-ನೆನ್ನೆಯವಳು ಅವಳದ್ದೇನು ಅಧಿಕಾರ'' ಎನ್ನುವುದು ಮೂರ್ಖತನ. ಬದುಕಿಗೆ ಅವಳು ಹೊಸ ಸೇರ್ಪಡೆಯಾದರೂ ಈಗ ಅವಳ ಬಾಧ್ಯತೆ ಹೆಚ್ಚು. ಇದನ್ನು ತಾಯಿ ಅರ್ಥಮಾಡಿಕೊಂಡರೆ ನಮ್ಮಲ್ಲಿ ಕ್ಲೀಷೆಯಾಗಿ ಬಿಟ್ಟಿರುವ ಅತ್ತೆ-ಸೊಸೆಯರ ಹಳಸಲು ಸಂಬಂಧವನ್ನು ನಿವಾರಿಸಿಕೊಳ್ಳಬಹುದು.

ಅಂದಮಾತ್ರಕ್ಕೆ ಮದುವೆಯಾದ ಕೂಡಲೇ ಮಗನನ್ನು ಸೊಸೆಗೆ ದಾನವಾಗಿ ಕೊಟ್ಟುಬಿಟ್ಟಂತೆ, ಸರ್ವಥಾ ದೂರವಾದಂತೆ ಎಂದು ಭಾವಿಸಬಾರದು. ಮಗನಿಗೆ ಒಳ್ಳೆಯ ವಿವೇಕ ಕಲಿಸಿ ಸಾಕಿದ್ದರೆ, ಅವನು ತಾಯಿಗೆ ತೋರಬೇಕಾದ ಗೌರವಾದರಗಳನ್ನು ಮದುವೆಯ ನಂತರವೂ ತೋರೇ ತೋರುತ್ತಾನೆ. ಆ ಗೌರವವನ್ನು ಉಳಿಸಿಕೊಳ್ಳಬೇಕಾದರೆ ತಾಯಿ ಆ ಸಂಬಂಧದಲ್ಲಿ ಮೂಗು ತೂರಿಸದೆ, ಯೋಗ್ಯ ಅಂತರವನ್ನು ಕಾಯ್ದು ಕೊಳ್ಳಬೇಕು. ಸೊಸೆಯೊಂದಿಗಿನ ಸಂಬಂಧವನ್ನು ಕೆಡಿಸಿಕೊಂಡ ಅತ್ತೆ ಮಗನಿಗೂ ಕಿರಿಕಿರಿಯಾಗುತ್ತಾಳೆ. ಮಗಳಂತೆಯೇ ಆಕೆ ಸೊಸೆಯನ್ನು ಸಮಾನವಾಗಿ ನಡೆಸಿಕೊಳ್ಳಬೇಕು. ಇಲ್ಲದಿದ್ದರೆ ಆ ಪಕ್ಷಪಾತ ಮಗನ ಕಣ್ಣಿಗೆ ಬಿದ್ದೇ ಬೀಳುತ್ತದೆ. ಇಬ್ಬಗೆಯ ನೀತಿಯ ತಾಯಿಯನ್ನು ಯಾವ ಮಗ ಮೆಚ್ಚುತ್ತಾನೆ?

ಮಗು ತೀರ ಚಿಕ್ಕದಿದ್ದಾಗ, ಬೆಳೆಯುವ ಹಂತದಲ್ಲಿ ತಾಯಿಗೆ ನೂರು ಸಂತೋಷಗಳನ್ನು ಒದಗಿಸಿರುತ್ತದೆ. ಅದೇ ತಾಯ್ತನದ ಫಲ. ಅದನ್ನು ಬಿಟ್ಟು ಬೇರೆಯದನ್ನು ಆಶಿಸಿದರೆ ನಿರಾಸೆಯ ಸಂಭವವಿರುತ್ತದೆ. ಇದನ್ನು ತಡೆಯಲಂದೇ ನಮ್ಮ ಹಿರಿಯರು ವಾನಪ್ರಸ್ಥ ಸಂನ್ಯಾಸ ಮುಂತಾದವನ್ನು ಆಯೋಜಿಸಿದ್ದರು. ಆದರೆ ಇಂದಿಗೆ ಅವೆಲ್ಲ ಆಗದ ಮಾತು. ಕಾಡಿಗೆ ಹೋಗುವುದರಲ್ಲಿ ಸನ್ಯಾಸವಿಲ್ಲ, ಸಂಸಾರದಲ್ಲಿದ್ದೇ ಒಂದು ಬಗೆಯ ಸನ್ಯಾಸತ್ವವನ್ನು ತಾಯಿ ರೂಢಿಸಿಕೊಂಡರೆ ಆಕೆ ಸುಖವಾಗಿರಬಲ್ಲಳು.

ತನ್ನ ಆರೋಗ್ಯವನ್ನು ಆಕೆ ಸರಿಯಾಗಿ ಕಾಪಾಡಿಕೊಳ್ಳಬೇಕು. ದೇಹವನ್ನು ನಿಷ್ಪ್ರಯೋಜಕ ಮಾಡಿಕೊಳ್ಳುವುದು ಒಂದು ಪಾಪ ಎಂಬ ತಿಳುವಳಿಕೆಯಿಂದ ಆಕೆ ಪಟುವಾಗಿರಬೇಕು. ತನ್ನ ಮತ್ತು ಎಲ್ಲರ ಅನುಕೂಲಕ್ಕಾಗಿ ಆಕೆ ಅನಾರೋಗ್ಯದ ವೇಳೆಯಲ್ಲಿ ಪಥ್ಯ-ಪಾನ, ಔಷಧೋಪಚಾರಗಳಲ್ಲಿ ಎಚ್ಚರ ತಾಳಬೇಕು. ''ಅಯ್ಯೋ ನನ್ನ ಕರ್ಮ, 4 ವರ್ಷದಿಂದ ಹೀಗೆ ಅನುಭವಿಸುತ್ತಿದ್ದೀನಿ'' ಎಂದು ಹೇಳಿಕೊಳ್ಳುವುದು ದೊಡ್ಡದಲ್ಲ. ಅದರಿಂದ ಮತ್ತೊಬ್ಬರಿಗೆಷ್ಟು ತೊಂದರೆ ಅರ್ಥ ಮಾಡಿಕೊಳ್ಳಬೇಕು. ಹಾಗಾಗದಂತೆ ಮುಂಜಾಗರೂಕತೆಯಿಂದ ವ್ಯವಹರಿಸಬೇಕು.

ಮನೆ ಎಂದ ಮೇಲೆ ನೂರು ಸಂಗತಿಗಳಿರುತ್ತದೆ. ಇಷ್ಟವಾಗುವು, ಇಷ್ಟವಾಗದ ಘಟನೆಗಳು ನಡೆಯುತ್ತವೆ. ತಾಯಿ ಅದನ್ನೆಲ್ಲ ಚಿಕ್ಕದು ಮಾಡಿಯೋ, ದೊಡ್ಡದು ಮಾಡಿಯೋ ತಿರುಚಿಯೋ ಬಂಧುಗಳಲ್ಲಿ ನೆರೆಹೊರೆಯವರಲ್ಲಿ ಹೇಳಿಕೊಳ್ಳುತ್ತಾ ಹೋದರೆ ಮಗನ ದೃಷ್ಟಿಯಲ್ಲಿ ಬೆಲೆ ಕಳೆದುಕೊಳ್ಳುತ್ತಾಳೆ.

ಬದಲಾಗುತ್ತಿರುವ ಜಗತ್ತಿನೊಂದಿಗೆ ಸಹಕರಿಸದೆ ವಯಸ್ಸಾಗುತ್ತಾ ಆಗುತ್ತಾ ಹೆಚ್ಚು ಹಠಮಾರಿಯಾಗುವ, ಕಂದಾಚಾರಗಳತ್ತ ಒಲುವ, ಸದಾಕಾಲ ಏನನ್ನಾದರೂ ಅಸಮಾಧಾನ ವ್ಯಕ್ತಪಡಿಸುವ, ಪಾಸಿಟಿವ್ ಆ್ಯಟಿಟ್ಯೂಡ್ ಇಲ್ಲದ ತಾಯಿ ಯಾವ ಮಗನಿಗೂ ಇಷ್ಟವಾಗುವುದಿಲ್ಲ.

ಒಂದು ಮಾತನ್ನು ತಾಯಿ ಮನಸ್ಸಿಗೆ ತಂದು ಕೊಳ್ಳಬೇಕು, ಮಗ ಯೋಗ್ಯನಾಗಲಿ, ತನ್ನನ್ನು ಚೆನ್ನಾಗಿ ನಡೆಸಿಕೊಳ್ಳಲಿ, ಸಂತೋಷ. ಒಂದು ವೇಳೆ ಹಾಗೆ ಆಗದೆ ಸಂಬಂಧ ಕೆಟ್ಟು ಹೋಯಿತೋ, ಅಲ್ಲಿಗೆ ಜಗತ್ತೇ ಪ್ರಳಯ ಎಂದು ಭಾವಿಸಬಾರದು. ಮಗನಿಗೆ ತಾಯಿ ಹೇಗೆ ಜೀವನದ ಒಂದು ಅಂಗವೋ, ತಾಯಿಗೂ ಅಷ್ಟೇ. ಮಗ ಜೀವನದ ಒಂದು ಅಂಗ, ಸರ್ವಸ್ವವಲ್ಲ. ಅವನನ್ನು ಹೊರತು ಪಡಿಸಿಯೂ ತನಗಾಗಿ ಒಂದ ಬದುಕನ್ನು ಆಕೆ ರಚಿಸಿಕೊಂಡಿರಬೇಕು. ಒಂದು ಸ್ನೇಹವಲಯವಿರಬೇಕು.

ಇದೆಲ್ಲ ತಾಯಿಗೇ ಆಯಿತಲ್ಲ? ಮಗನಿಗೆ ಏನು? ಅವನ ಕಡೆಯಿಂದ ಯಾವ ಹೊಂದಾಣಿಕೆ ಎಂದರೆ ಅದು ಬೇರೆಯದೇ ಪುರಾಣ. ಅದನ್ನು ಮತ್ತೊಮ್ಮೆ ಆಲೋಚಿಸಬಹುದು. ಮಗಳನ್ನು ಬೆಳೆಸುವುದೂ ಇದಕ್ಕಿಂತ ಸ್ವಲ್ಪ ಭಿನ್ನ. ಅದೂ ಬೇರೆಯೆ ಕಥೆ. ಪಕ್ವವಾದ ಫಲ ಮರಕ್ಕೆ ಅಂಟಿಕೊಂಡಿರಲಾರದು. ಕಳಚಿಕೊಳ್ಳುವುದು ಅದರ ಧರ್ಮ. ಮಗ ಅಂತಹ ಒಂದು ಹಣ್ಣು. ತಾನು ಅದನ್ನು ಸೃಷ್ಟಿಸಬೇಕು, ಬೆಳೆಸಬೇಕು, ಪಕ್ವಗೊಳಿಸಬೇಕು ಜಗತ್ತಿಗೆ ನೀಡಬೇಕು. ಹಣ್ಣನ್ನು ಮರವೇ ತಿನ್ನಬಾರದು. ಇದರಲ್ಲೇ ಮರದ ಸಾಫಲ್ಯ. ಆ ಪ್ರಕ್ರಿಯೆಯಲ್ಲೇ ಅದು ಸಂತೋಷ ಕಾಣಬೇಕು ತಾಯಿಯೂ ಅಂಥದೊಂದು ಮರ. ಅಲ್ಲವೆ? ಹೌದೇ? ಏನನ್ನುತ್ತೀರಿ?

○

ಪಾರಾಗುವ 'ಪಾರಿಜಾತ'

ನಿನ್ನೆ ಸಂಜೆ ಈ ಗಿಡದಲ್ಲಿ ಎಷ್ಟೊಂದು
ಹೊಸ ಹುಟ್ಟಿತ್ತು!? ಕಿರುಗಣ್ಣಳ
ಬಿರಿ ತುಟಿಗಳ ಪುಟ್ಟಪುಟ್ಟ
ನವಚೇತನಗಳು! ಅದೆಷ್ಟು
ಸಂಭ್ರಮವಿತ್ತು ಈ ಹಸುರಿಗೆ ?
ಗರ್ಭತುಂಬಿದ ಒಡಲೊಳಗೆ
ಹಸನಾದ ಮಿಸುಕಾಟ
ಮೈ ತುಂಬಾ ನಕ್ಷತ್ರ
ಮಿನುಗುವ ಮೈಮಾಟ
ಸಂಜೆ ಸೂರ್ಯನ ಕೆಂಪು
ಕಿರಣಗಳಿಗೆ ತನ್ನ ಚಿಗುರು ಬಸಿರಿನ
ಕೆಂಪು ಕಂಪನ್ನು ಬೆರೆಸಿ
ಗಾಳಿಗೆ ಗಂಧ ನೀಡಿದ
ಸೊಬಗು ಗರುವಗಳು!
ಅದೇನೇ ಪಾರಿಜಾತ ? ಹಾಗೆ
ನಿಂತುಬಿಟ್ಟೆ ಬೆಳ್ಳಂಬೆಳಗಿನ
ಮಂಜು ಹನಿಗಳ ಹೊದ್ದು ಹಚ್ಚಹಸುರಾಗಿ
ಬಟ್ಟಬಯಲಲ್ಲಿ ದಿಟ್ಟ ದಿಗಂಬರೆಯಾಗಿ
ಅದು ಹೇಗೆ ಕಳಚಿಕೊಂಡೆಯೆ ತಾಯಿ
ನಿನ್ನೆ ಸಂಜೆಯ ನಿನ್ನೊಡಲ ಸುಗಂಧದ
ಮಿಸುಪುಗಳನ್ನು ? ನಿನ್ನ ಬುಡದಲ್ಲಿ
ಒಡಲ ಸಂಬಂಧ ಕಳಚಿರುವ ಅವು
ನಿನ್ನವೇ ಅಲ್ಲವೇನೋ ಎಂಬ ನಿನ್ನ
ನಿಲುವಿಗೆ ಶರಣು ಶರಣೆಂಬೆ
ನಿನ್ನ ಪಾರಾಗುವ ಪರಿಗೆ ಬೆರಗಾದೆ
ಈ ನಿನ್ನ ನಿರುಂಬಳ ತನದ ನಿತ್ಯ
ಸತ್ಯಕ್ಕೆ ಮಾರುಹೋದೆ !!!

ಶಾಂತಾನಾಗರಾಜ್

ಟಿ.ವಿ, ಧಾರವಾಹಿ ಮತ್ತು ಜಾಹೀರಾತುಗಳು ಸಾರುತ್ತಿರುವ ಮೌಲ್ಯಗಳು

- ಶಾಂತನಾಗರಾಜ

ಹಿಂದೊಂದು ಕಾಲವಿತ್ತು ಬಹಳ ಹಿಂದೇನಲ್ಲ ಈಗ್ಗೆ 25-30ವರ್ಷಗಳ ಕೆಳಗೆ. ಗೃಹಿಣಿಯರು ವಾರಕ್ಕೊಮ್ಮೆಯೋ ಹದಿನೈದು ದಿನಕ್ಕೊಮ್ಮೆಯೊ ಮಧ್ಯಾಹ್ನದ ಬಿಡುವಿನಲ್ಲಿ ಅಕ್ಕಪಕ್ಕದ ಹೆಂಗಳೆಯರು ಸೇರಿ ಮ್ಯಾಟಿನಿ ನೋಡಿಬರುವುದು. ಇದು ಹಳ್ಳಿ-ನಗರಗಳೆನ್ನದೆ ಮಧ್ಯಮ ವರ್ಗದ ವಿದ್ಯಾವಂತ ಗೃಹಿಣಿಯರಿಗೆ ಪ್ರಿಯವಾಗಿದ್ದ ಕಾರ್ಯಕ್ರಮ. ಇದೊಂದು ರೀತಿ ನಿಜಕ್ಕೂ ಆರೋಗ್ಯಕರ ಹವ್ಯಾಸವಾಗಿತ್ತು. ಮನರಂಜನೆ ಎನ್ನುವದು ದೃಶ್ಯದ ಮುಖಾಂತರ ವಾರಕ್ಕೊಮ್ಮೆ, ಹದಿನೈದು ದಿನಕ್ಕೊಮ್ಮೆ ಸಿಕ್ಕುವುದು ಸರಿಯಾದ ಕ್ರಮ. ಇದಲ್ಲದೆ ಗಂಡ ಮಕ್ಕಳು, ಶಾಲೆ ಕಛೇರಿಗಳಿಗೆ ಹೋದ ನಂತರದ ಬಿಡುವಲ್ಲಿ ಕಾದಂಬರಿಯಂಥ ಓದು ಗೃಹಿಣಿಯರಿಗೆ ಪ್ರಿಯವಾಗಿತ್ತು. ಇದರಿಂದ ಮನರಂಜನೆಯಷ್ಟೇ ಅಲ್ಲ ಒಳ್ಳೆಯ ಕಾದಂಬರಿಗಳ ಜ್ಞಾನವೂ ಸಿಗುತ್ತಿತ್ತು. ಇಂಥ ವಾತಾವರಣ ಮತ್ತು ಇದರಿಂದ ದೊರಕುತ್ತಿದ್ದ ಸಮಾಧಾನ ಮಹಿಳಾ ಪ್ರಜ್ಞೆಯನ್ನು ಸುಸ್ಥಿತಿಯಲ್ಲಿಡುತ್ತಿದ್ದುವು.

ಆದರೆ ಇಂದು ಟಿ.ವಿ. ಎನ್ನುವ ಯಂತ್ರ ಮನೆಮನೆಯನ್ನು ತಲುಪಿದ ಮೇಲೆ ಬದುಕು ಏನಾಗಿದೆ ಎನ್ನುವುದರ ಪರಿಜ್ಞಾನ ಪೂರ್ಣ ಪ್ರಮಾಣದಲ್ಲಿ ಸಾಮಾನ್ಯ ನಿಲುವಿಗೆ ಇನ್ನೂ ನಿಲುಕುತ್ತಿಲ್ಲ. ಮನಃಶಾಸ್ತ್ರಜ್ಞರ ಪ್ರಕಾರ ಗರ್ಭಿಣಿ ಮಹಿಳೆ ಪ್ರತಿನಿತ್ಯ ಕ್ರೌರ್ಯ ಹಿಂಸೆಗಳನ್ನು ನೋಡುತ್ತಿದ್ದರೆ ಅವಳ ರಕ್ತದೊತ್ತಡ ಏರುಪೇರಾಗುತ್ತದೆ. ಮಿದುಳಿನ ನರಮಂಡಲ ಪ್ರಶಾಂತ ಸ್ಥಿತಿಯಲ್ಲಿರುವುದಿಲ್ಲ. ಪರಿಣಾಮ ಹುಟ್ಟಿದ ಮಗು ತೀರಾ ಅಳುಬುರುಕ, ಅತಿ ಅನಾರೋಗ್ಯ, ಚುರುಕು, ಅಥವಾ ಇನ್ನಿತರ ಮಾನಸಿಕ ವ್ಯಯಗಳಿಗೆ ಬಲಿಯಾಗಬಹುದು. ಸತತ ಟಿ.ವಿ. ವೀಕ್ಷಣೆಯಿಂದ ನಲವತ್ತೈದು - ಐವತ್ತರ ಮಹಿಳೆಯರಿಗೆ ವಂಶವಾಹಿಯಲ್ಲಿಲ್ಲದಿದ್ದರೂ ರಕ್ತದೊತ್ತಡ, ಮಧುಮೇಹದಂಥ ಕಾಯಿಲೆಗಳು ಬರುತ್ತವೆ. ನರಮಂಡಲಗಳ ಮೇಲೆ ಬೀಳುವ ಅಧಿಕ ಒತ್ತಡದಿಂದ ಬೆನ್ನುನೋವು, ಸೊಂಟನೋವು ತಲೆನೋವು ಇತ್ಯಾದಿ ನಿರಂತರ ಕಾಯಿಲೆಗಳಿಗೆ ಗುರಿಯಾಗುತ್ತಾರೆ. ಇದು ಮನರಂಜನೆಯ ಹೆಸರಿನಲ್ಲಿ ದೊರಕುತ್ತಿರುವ ಬಳುವಳಿಗಳು. ಕೆಲವು ಮಹಿಳೆಯರಂತೂ ಟಿ.ವಿ.ಗೆ ಅದೆಷ್ಟು 'ಅಡಿಕ್ಟ್' ಆಗಿಬಿಟ್ಟಿರುತ್ತಾರೆಂದರೆ, ಒಂದುದಿನ ಕರೆಂಟ್ ಹೋಗಿಬಿಟ್ಟರೆ ಅವರ ಚಡಪಡಿಕೆ ದೇವರಿಗೇ ಪ್ರೀತಿ.

''ಯಾವುದೂ ಅತಿಯಾಗಬಾರದು ಮನುಷ್ಯ ಊಟದಲ್ಲಿ ಹೇಗೆ ರುಚಿಗಳನ್ನು ಹದವರಿತು ಬಳಕೆ ಮಾಡುತ್ತಾನೆ? ಇಡೀ ದಿನ ಸಿಹಿ ಒಂದೇ ಅಥವಾ ಖಾರ, ಉಪ್ಪು, ಕಹಿ, ಒಗರು ಒಂದೇ ರುಚಿಯನ್ನು ತಿಂದುಕೊಂಡಿರುವುದಕ್ಕೆ ಆಗುವುದಿಲ್ಲ ಅಲ್ಲವೇ? ಹಾಗೇ 24 ಗಂಟೆಗಳ ಹತ್ತಾರು ಚಾನಲ್‌ಗಳ ಮನರಂಜನೆ ಮನುಷ್ಯನಿಗೆ ಅಗತ್ಯವಿದೆಯೇ? ಇದರಿಂದ ಆಗುವ ಸಾಧನೆಯಾದರೂ ಏನು? ಇಂಥ ಪ್ರಶ್ನೆಗಳಿಗೆ ಉತ್ತರವನ್ನು ನಾವೀಗ ಕಂಡುಕೊಳ್ಳಬೇಕಾಗಿದೆ. ಇನ್ನು ಈ ಟಿ.ವಿ. ಗಳು ಧಾರಾವಾಹಿಯ ಹೆಸರಲ್ಲಿ ಬೀರುತ್ತಿರುವ ಮೌಲ್ಯಗಳೋ ಮಹಿಳೆಯರನ್ನು ಒಂದೆರಡು ಶತಮಾನ ಹಿಂದಕ್ಕೆ ಎಳೆಯುವಂಥಾದ್ದೇ ಆಗಿದೆ.

70ರ ದಶಕದಲ್ಲಿ ಬಾಲಾಪರಾಧಿಗಳ ಬಗ್ಗೆ ಲೇಖನ ಬರೆಯಲು ಆ ಮಕ್ಕಳನ್ನು ಸಂದರ್ಶಿಸಿದಾಗ ಕಂಡುಬಂದ ಸತ್ಯವೆಂದರೆ, ಅವರಲ್ಲಿ ನೂರಕ್ಕೆ ಎಪ್ಪತ್ತೈದು ಮಕ್ಕಳು ಕಳ್ಳತನ - ದರೋಡೆಗಳಲ್ಲಿ ಭಾಗಿಯಾಗಲು ಸಿನಿಮಾದಿಂದ ಪ್ರೇರಿತರಾಗಿದ್ದರು. ಸಿನಿಮಾಗಳೇ ಈ ಮಟ್ಟದಲ್ಲಿ ಮಕ್ಕಳ ಚಿತ್ತವನ್ನು ಕಲುಷಿತ ಮಾಡುವುದಾದರೆ ಇನ್ನು ಮನೆಯ ಮೂಲೆಯಲ್ಲಿರುವ ಈ ಮೂರ್ಖಪೆಟ್ಟಿಗೆ (ಅದಕ್ಕಿಂತ 'ಭಯಂಕರ ಪೆಟ್ಟಿಗೆ' ಎನ್ನಬಹುದು) ಯಾವ ಯಾವ ವಯಸ್ಸಿನ ಮನುಷ್ಯರಿಗೆ ಏನೇನು ಪರಿಣಾಮಗಳನ್ನು ಒದಗಿಸಬಹುದು? ಇವತ್ತು ಪ್ರೇಮ ಪ್ರಣಯಗಳೆಲ್ಲಾ ಹೈಸ್ಕೂಲು ಮಟ್ಟದಲ್ಲೇ ಪ್ರಾರಂಭವಾಗಿವೆ. ಆಸಿಡ್ ಎರೆಚುವಂಥ ಕ್ರೌರ್ಯ, ಹಿಂಸೆಗಳು ಸಮಾಜದಲ್ಲಿ ವ್ಯಾಪಕವಾಗಿ ಹೆಚ್ಚಿ ಹಬ್ಬುತ್ತಿವೆ. ಇದೆಲ್ಲದರ ನೇರ ಪರಿಣಾಮಗಳನ್ನು ಅನುಭವಿಸುವವಳು 'ಮಹಿಳೆ' ಎನ್ನುವ ಕಠೋರ ಸತ್ಯ ಯಾರಿಗೂ ಅರಿವಾಗುತ್ತಿಲ್ಲ.

"ಸಿನಿಮಾದ ಮೌಲ್ಯಗಳೇ ಮತ್ತಷ್ಟು ವಿಕೃತರೂಪದಲ್ಲಿ ಟಿ.ವಿ. ಧಾರಾವಾಹಿಗಳ ಹೆಸರಲ್ಲಿ ಪ್ರಚಾರವಾಗುತ್ತಿವೆ. 'ಮೊದಲ ಪ್ರೇಮ ಶ್ರೇಷ್ಠ ಮತ್ತು ಪ್ರೇಮ ಅಮರ' ಎನ್ನುವ ನಂಬಿಕೆಯನ್ನು ಸಾರಲು ಚಿತ್ರ ವಿಚಿತ್ರ ಕಥೆಗಳನ್ನು ಹೆಣೆಯಲಾಗುತ್ತಿದೆ. ಅದರಲ್ಲೂ ಈ ಕಥೆಗಳ ನಾಯಕಿಯರು ತಮ್ಮ ಪ್ರೇಮ ಮತ್ತು ಶೀಲಗಳ ಪವಿತ್ರತೆಯನ್ನು ಸಾಬೀತು ಮಾಡಲು ವಿದ್ಯಾವಂತೆಯಾದರೂ ಪ್ರಿಯಕರ ಮತ್ತೊಂದು ಮದುವೆಯಾದರೂ, ಅವನ ಮನೆ ಅಡುಗೆಯವಳಾಗಿ, ದಾಸಿಯಾಗಿ ತನ್ನ ಮೊದಲ ಪ್ರೇಮಕ್ಕೆ ತನ್ನನ್ನು ತಾನು ಅರ್ಪಿಸಿಕೊಳ್ಳುವ ಅಮೋಘ ತ್ಯಾಗವನ್ನು ಪ್ರದರ್ಶಿಸುತ್ತಾರೆ. ಇದು ಎಷ್ಟು ಅವೈಜ್ಞಾನಿಕ ಮತ್ತು ನೀತಿ ಬಾಹಿರವೆನ್ನುವ ಚಿಂತನೆ ಈ ಧಾರಾವಾಹಿಯ ಬ್ರಹ್ಮರಿಗೆ ಬರುವುದೇ ಇಲ್ಲ. ಹೆಣ್ಣನ್ನು ಬೊಂಬೆಯಂತೆ, ಪೆದ್ದಿಯಂತೆ, ಚಿತ್ರಿಸಲಾಗುತ್ತದೆ. ದುರಂತವೆಂದರೆ ಈ ಚಿತ್ರಣವನ್ನೇ ಸತ್ಯವೆಂದು ನಂಬುವ ನಮ್ಮ ಹದಿಹರೆಯದ ಹುಡುಗಿಯರು ಈ

ಪಾತ್ರಗಳನ್ನೇ ರೋಲ್ ಮಾಡೆಲ್‌ಗಳಾಗಿ ಸ್ವೀಕರಿಸುವುದು. ಒಂದು ಕಡೆ ನಿಜಜೀವನದಲ್ಲಿ ಪರೀಕ್ಷೆಗಳಲ್ಲಿ ರ್‍ಯಾಂಕ್ ಫಸ್ಟ್‌ಕ್ಲಾಸ್‌ಗಳಿಕೆಯಲ್ಲಿ ಹುಡುಗಿಯರು ಹುಡುಗರಿಗಿಂತ ಮುಂದಿದ್ದಾರೆ. ಮಹಿಳೆಗೆ ಪ್ರವೇಶವೇ ಇರದಿದ್ದ ಕ್ಷೇತ್ರಗಳಲ್ಲೆಲ್ಲಾ ನಿಧಾನವಾಗಿ ಮಹಿಳೆ ತನ್ನ ಬುದ್ಧಿ ಸಾಮರ್ಥ್ಯ ಮತ್ತು ಕೆಲಸದ ಬದ್ಧತೆ (ಕಮಿಟ್‌ಮೆಂಟ್) ಯಿಂದಾಗಿ ಸ್ಥಾನ ಪಡೆಯುತ್ತಿದ್ದಾಳೆ ಇಂಥ ನೂರಾರು ಮಹಿಳೆಯ ಬದುಕು ಇಲ್ಲಿ ಪಾತ್ರವಾಗಿ ಮೂಡುವುದೇ ಇಲ್ಲ. ಕಲ್ಪನಾ ಚಾವ್ಲಾಳಂಥ ಮಹಿಳೆ ಜಗತ್ತಿಗೆ ಬೆರಗನ್ನು ಹುಟ್ಟಿಸಿದ್ದು ಆಕೆ ಸತ್ತ ನಂತರವೇ! ಬದುಕಿದ್ದಾಗ ಅಲ್ಲ. ಇವತ್ತಿಗೂ ನಾನಾ ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಮಹಿಳೆ ಮತ್ತು ಅವಳ ಬದುಕು ನಮ್ಮ ಟಿ.ವಿ. ಧಾರಾವಾಹಿ ಬ್ರಹ್ಮರಿಗೆ ಅಪರಿಚಿತವಾಗಿಯೇ ಉಳಿದಿದೆ. ಪ್ರೇಮಕಥೆಗಳನ್ನು ಹೊಸೆಯುವುದು ಬಿಟ್ಟರೆ ಅವರಿಗೆ ಮತ್ತೇನೂ ತೋರುವುದೇ ಇಲ್ಲ.

ಧಾರಾವಾಹಿಗಳ ಮತ್ತೊಂದು ಸಂದೇಶ ಮಹಿಳೆಗೆ ಅಧಿಕಾರ ಬಂದುಬಿಟ್ಟರೆ ಅವಳ ಕೈಕೆಳಗಿನವರನ್ನು ಕ್ರೂರವಾಗಿ ಗೋಳಾಡಿಸುತ್ತಾಳೆ ಎನ್ನುವುದು. ಈ ಅಧಿಕಾರವನ್ನು ಅಭಿವೃದ್ಧಿ ಕಾರ್ಯಗಳಿಗೆ ಬಳಸುವುದಕ್ಕಿಂತ 'ಸೇಡುತೀರಿಸಿಕೊಳ್ಳಲು ತನಗಾಗದವರನ್ನು ಮುಗಿಸಲು' ಬಳಸುತ್ತಾಳೆ ಎನ್ನುವುದು ಈ ಜನರ ನಂಬಿಕೆ. ಸಿನಿಮಾ ಕಥೆಗೆ ಸುಖಾಂತವಾಗಿ ಮುಗಿಸಲು ಅಂತ್ಯದಲ್ಲಿ ಫೈಟಿಂಗ್ ಇಟ್ಟರೆ ಆಗುತ್ತದೆ. ದುಷ್ಟಶಿಕ್ಷಕ, ಶಿಷ್ಟರಕ್ಷಕ ನಾಯಕ ವಿಜೃಂಭಿಸಿದರೆ ಮುಗಿಯುತ್ತದೆ. ಆದರೆ ಟಿ.ವಿ. ಸೀರಿಯಲ್‌ಗಳಲ್ಲಿ ಕಡಿಮೆ ಎಂದರೂ ಮುನ್ನುರು ನಾನ್ನುರು ಎಪಿಸೋಡ್‌ಗಳಿಗೆ ಎಳೆಯಬೇಕಾದ ವ್ಯವಸ್ಥೆಯಲ್ಲಿ ಇಂಥ ಶಿಕ್ಷೆ ಮತ್ತು ರಕ್ಷೆಗಳನ್ನು ತರುವುದು ಹೇಗೆ? ಅದಕ್ಕೆ ಈ ಜನ ಕಂಡುಕೊಂಡಿರುವ ಉಪಾಯ ಖಳನಾಯಕಿ ಎನ್ನುವ ಸ್ಲೋಪಾಯ್ಸನ್. ಆದರೆ ಇದು ಸಾರುವ ಸಂದೇಶ ಮಹಿಳೆಗೆ ಅಧಿಕಾರಬಂದರೆ ಅವಳು ಖಳನಾಯಕಿ ಯಾಗುತ್ತಾಳೆ, ಆದ್ದರಿಂದ ಮಹಿಳೆ ಪುರುಷನ ಅಧೀನವಾಗಿಯೇ ಇರಲಿ ಎನ್ನುವುದು. ಇದರಿಂದ ಜನ ಎಷ್ಟು ಪ್ರಭಾವಿತರಾಗುತ್ತಾರೆಂದರೆ ಬ್ಯಾಂಕ್‌ಗಳಲ್ಲಿ ಇತರ ಆಫೀಸಿನಲ್ಲಿ ಮಹಿಳಾ ಅಧಿಕಾರಣಿಯರನ್ನು ಈ ಪಾತ್ರಗಳಿಗೆ ಹೋಲಿಸಿ ಮಾತನಾಡುತ್ತಾರೆ. ಈ ವಿಚಾರವಾಗಿ ಸಂದರ್ಶನ ಮಾಡಲು ಒಬ್ಬ ಬ್ಯಾಂಕ್ ಮ್ಯಾನೇಜರ್‌ರನ್ನು ಭೇಟಿ ಮಾಡಿದಾಗ ಆಕೆ ನೊಂದು ಹೇಳಿದರು ''ನೋಡಿ ನನ್ನ ಕೈಕೆಳಗಿನ ಒಂದಿಬ್ಬರು ಪುರುಷ ಸಹೋದ್ಯೋಗಿಗಳು ಬೇಕಾಬಿಟ್ಟಿ ರಜ ಹಾಕುತ್ತಿದ್ದರು ಎಷ್ಟು ಸಾರಿ ತಿಳಿಹೇಳಿದರೂ ತಿದ್ದಿಕೊಳ್ಳಲಿಲ್ಲ. ಒಮ್ಮೆ ಕರೆದು ಛೀಮಾರಿ ಹಾಕಿ ಮೆಮೋ ಇಷ್ಯೂ ಮಾಡಿದೆ. ದೊಡ್ಡವರ ಕೈಕಾಲು ಹಿಡಿದು ಈ ಬ್ರಾಂಚಿನಿಂದ ವರ್ಗ ಮಾಡಿಸಿಕೊಂಡು ಹೋದರು. ಆದರೆ ಎಲ್ಲ ಕಡೆ ನನಗೊಂದು ಹೆಸರಿಟ್ಟು ಪ್ರಚಾರ ಮಾಡುತ್ತಿದ್ದರು. ನನಗೆ ಯಾಕೆ ಈ ಹೆಸರು ಅಂತ ಅರ್ಥವೇ ಆಗಲಿಲ್ಲ. ಆಮೇಲೆ ತಿಳಿಯಿತು ಯಾವುದೋ ಧಾರಾವಾಹಿಯ ಕೆಟ್ಟ ಅಧಿಕಾರಿಣಿ ಪಾತ್ರದ ಹೆಸರಂತೆ. ಅವಳೂ ತನ್ನ ಅಧಿಕಾರ ಬಳಸಿ ಬೇರೆಯವರ ವ್ಯಾಪಾರವನ್ನೆಲ್ಲಾ ಮುಳುಗಿಸಿ ಬಿಡುತ್ತಾಳಂತೆ''! ಇವತ್ತು ತನ್ನ ಸ್ವಪ್ರಯತ್ನದಿಂದ ಮುಂದೆ ಬರುತ್ತಿರುವ ಮಹಿಳೆಯರಿಗೆ ಈ ಧಾರಾವಾಹಿಗಳು ಹೇಗೂ ಕಿರುಕುಳ ಕೊಡಬಹುದು ಎನ್ನುವ ವಿಚಾರ ಊಹೆಗು ನಿಲುಕದ್ದು.

ಧಾರಾವಾಹಿಗಳಲ್ಲಿ ಮಹಿಳಾ ಪ್ರಧಾನ ಕಥೆಗಳಿಗೇ ಪ್ರಾಧಾನ್ಯ ಕೊಡಲಾಗುತ್ತದೆ. ಏಕೆಂದರೆ ಅದರ ವೀಕ್ಷಕರು ಮಹಿಳೆಯರೇ ಎನ್ನುವ ವಿಚಾರ ತಯಾರಕರಿಗೆ ತಿಳಿದಿದೆ. ಅಷ್ಟೆ ಅಲ್ಲ ಅದನ್ನು ಪ್ರಸಾರ ಮಾಡಲು ಜಾಹೀರಾತು ನೀಡುವ ಕಂಪನಿಗಳ ಗುರಿಯೂ ಮಹಿಳೆಯನ್ನು ತಲುಪುವುದೇ ಆಗಿರುತ್ತದೆ. ಆದ್ದರಿಂದ ಕಣ್ಣೀರು ಸುರಿಸುವ ಕಥೆಗಳಿಗೇ ಮೊದಲ ಆದ್ಯತೆ. ಕೌಟುಂಬಿಕ ಕಥೆಗಳು, ಆಗಿರುತ್ತದೆ. ಕೌಟುಂಬಿಕ ಕಥೆಗಳು, ಶ್ರೀಮಂತ ಕುಟುಂಬದ ಕಥೆಗಳು ಕಣ್ಣಿಗೆ ವೈಭವ ಕಟ್ಟಿಕೊಡುವ ದೃಶ್ಯಗಳು ಇಲ್ಲಿ ವಿಜೃಂಭಿಸುತ್ತಿರುತ್ತವೆ. ಬಡ ಮಧ್ಯಮ ವರ್ಗದ ಮಹಿಳೆಯರಿಗೆ ಸೀರೆ, ಒಡವೆ ದೊಡ್ಡಮನೆ, ಅದರ ಟಿ.ವಿ. ಮತ್ತು ಇತರ ಪರಿಕರಗಳು, ನಿಟ್ಟುಸಿರಿನೊಂದಿಗೆ ಜೊಲ್ಲು ಸುರಿಸುತ್ತಾ ನೋಡುವ ನೋಟಗಳಾಗಿಬಿಡುತ್ತವೆ. ಇವು ಸರಳಜೀವನವನ್ನು ಕೊಲ್ಲುತ್ತದೆ. ಒಳಗೊಳಗೇ ತಮ್ಮ ಹಾಸಿಗೆ ಮೀರಿ ಕಾಲುಚಾಚುವ ಅತಿ ಆಸೆಯನ್ನು ಬಿತ್ತುತ್ತಿರುತ್ತವೆ. ನಿಯಮ, ನೀತಿಗಳನ್ನು ಗಾಳಿಗೆ ತೂರುತ್ತವೆ. ಮಹಿಳೆಯೆಂದರೆ ಹೀಗಿರಬೇಕು, ಎಂದೆಂದಿಗೂ ಸುಂದರಿಯಾಗಿ, ಗಂಡಿನ ದಾಸಿಯಾಗಿ, ಪತ್ನಿ ಉಪಪತ್ನಿಯರಾಗಿ ನೋಡಿದವರ ಕಣ್ಣು ಕುಕ್ಕುವಂತೆ ಬದುಕುವುದೇ ನಿಜವಾದ ಬದುಕು ಎನ್ನುವ ಅವೈಜ್ಞಾನಿಕ, ಅತಾರ್ಕಿಕ ಮತ್ತು ಅನಗತ್ಯ ಮೌಲ್ಯಗಳನ್ನು ಸಾಮಾನ್ಯ ಗೃಹಿಣಿಯರಿಗೆ ತಲುಪಿಸಲಾಗುತ್ತಿದೆ. ಪ್ರತಿ ಫ್ರೇಮ್‌ನಲ್ಲೂ (ಅಲ್ಲೊಬ್ಬ ಇಲ್ಲೊಬ್ಬ ಖಳ ನಾಯಕನನ್ನು ಬಿಟ್ಟರೆ) ಗಂಡು ಶ್ರೇಷ್ಠ ಎನ್ನುವ ಸಂದೇಶವನ್ನೇ ಇವು ಸಾರುತ್ತವೆ. ಇಂಥ ಧಾರಾವಾಹಿಗಳ ನೋಡುಗ ಮಹಿಳೆಯರು ಸ್ತ್ರೀ ಶಕ್ತಿಯ ಮೂಲ ಅರ್ಥವನ್ನೇ ಮರೆತು ಬಿಡುತ್ತಾರೆ. ತಮ್ಮೊಳಗಣ ಸಾಧ್ಯತೆಗೆ ತಿಲಾಂಜಲಿ ನೀಡಿ ಕಥೆಯ ಹಂದರಕ್ಕೆ ಜೋತು ಬೀಳುತ್ತಾರೆ. ಭಾರತದ ಯಾವ ಭಾಷೆಯ ಧಾರಾವಾಹಿಯೂ ಇಂದು ಒಳ್ಳೆಯ ಮೌಲ್ಯ ಮತ್ತು ಸಂದೇಶವನ್ನು ಖಂಡಿತಾ ನೀಡುತ್ತಿಲ್ಲ. ಹಿಂದೆ ಹಿಂದಿಭಾಷೆಯ 'ಉಡಾನ್' ಧಾರಾವಾಹಿಯಲ್ಲಿ ಹಳ್ಳಿಯ ಹುಡುಗಿಯೊಬ್ಬಳು ತನ್ನ ಸ್ವಂತ ಪ್ರಯತ್ನದಿಂದ ಪುರುಷ ಸೀಮಿತವಾದ, ಸ್ತ್ರೀ ಪ್ರವೇಶವೇ ಇಲ್ಲದಿದ್ದ ಏರ್‌ಫೋರ್ಸ್‌ನಂಥ ಕ್ಷೇತ್ರದಲ್ಲಿ ಕಾಲಿರಿಸಿಯಶಸ್ವಿಯಾದ ಕಥೆ ಬಿತ್ತರವಾಯಿತು. ಅದನ್ನ ನೋಡಿದ ಎಷ್ಟೋ ತರುಣಿಯರು ಎನ್.ಸಿ.ಸಿ. ಮತ್ತು ಏರ್‌ಫೋರ್ಸ್‌ಗಳಲ್ಲಿ ಭರ್ತಿಯಾದರು. 'ಹಮ್‌ಲೋಗ್' ಎನ್ನುವ ಧಾರಾವಾಹಿಯಲ್ಲಿ 'ಉದ್ಯೋಗದ ಆಮಿಷತೋರಿಸಿ ತಪ್ಪು ಹಾದಿಗೆಳೆದ ಹುಡುಗಿಯರಿಗೆ ಬದುಕು ನೀಡುವ ಸಂಘಟನೆ ಮಾಡಿಸುವ ನಾಯಕನ ಚಿತ್ರಣ ಎಷ್ಟು ಪರಿಣಾಮಕಾರಿ ಮತ್ತು ಪ್ರಭಾವಶಾಲಿಯಾಗಿತ್ತೆಂದರೆ ಅನೇಕ ಯುವಕ ಮತ್ತು ಯುವತಿಯರು ಇಂಥ ಸಂಘಟನೆಗಳನ್ನು ಸ್ಥಾಪಿಸಿ ಹಾದಿತಪ್ಪಿದ ಹುಡುಗಿಯರ ಬದುಕನ್ನು ಹಸನುಗೊಳಿಸುವ ದೀಕ್ಷೆ ಪಡೆದು ದುಡಿದರು. ಆದರೆ ಇಂದು ಹಿಂದಿ ಧಾರಾವಾಹಿಗಳ

ಗುಣಮಟ್ಟಸಹ ತೀರಾ ಕಳಪೆಯಾಗಿದೆ.

ನಮ್ಮ ಸಮಾಜದಲ್ಲಿ ನೂರೆಂಟು ರೋಗಗ್ರಸ್ಥ ಪರಿಪಾಠಗಳಿವೆ. ಅದನ್ನು ಗುರುತಿಸಿ ಅದರ ವೈಜ್ಞಾನಿಕ ಚಿಂತನೆ, ವಿಶೇಷಣೆ ನಡೆಸಿ ಆ ಬಗ್ಗೆ ಕಥೆಹೆಣೆದು ಧಾರಾವಾಹಿ ಗಳಾಗಿಸಿದರೆ ಬೇರೆಯವರಿಗೆ ಸ್ಫೂರ್ತಿ ನೀಡುತ್ತದೆ. ನವ ಸಾಕ್ಷರರ ಸಾಧನೆಗಳು, ಕಾರ್ಗಿಲ್ ಯೋಧರ ಬದುಕು, ಸೈನ್ಯ ಮಕ್ಕಳನ್ನು ಗಂಡಂದಿರನ್ನು ದತ್ತು ನೀಡಿ ಅವರ ಸಾವಿನ ಸುದ್ದಿಯ ಜೊತೆಗೇ ಬುದುಕುತ್ತಿರುವ ಹತಭಾಗಿಗಳ ಬದುಕು ರಾಮಾಯಣ ಮಹಾಭಾರತದಂಥ ಮಹಾಕಾವ್ಯಕ್ಕೆ ಒದಗುವಷ್ಟು ಕಥನ ಶಕ್ತಿಯನ್ನು ಪಡೆದಿವೆ. ಆದರೆ ಆ ಬಗ್ಗೆ ಯಾರಿಗೆ ಚಿಂತೆ ಇದೆ ?

ಇಂದಿನ ಧಾರಾವಾಹಿಗಳನ್ನು ನೋಡುತ್ತಿರುವ ಗೃಹಿಣಿಯರು ತಮಗೇ ಒಂದು ಪ್ರಶ್ನೆಯನ್ನು ಕೇಳಿಕೊಳ್ಳಬೇಕು'' ಇದರಿಂದ ನಾನು ಪಡೆಯುತ್ತಿರುವುದು ಏನನ್ನು? ಮನರಂಜನೆಯೊ ? ಜ್ಞಾನವೇ? ನೀತಿಪಾಠವೇ? ಇದು ನಿಜಕ್ಕೂ ನನ್ನ ಅಮೂಲ್ಯ ಸಮಯ ಯಾತಕ್ಕಾಗಿ ನಾನು ಹಾಳುಮಾಡಬೇಕು?

ಇನ್ನೂ ಧಾರಾವಾಹಿ ಮತ್ತು ಜಾಹೀರಾತಿನ ನಂಟಂತೂ ತೀರಾ ವಿಚಿತ್ರವಾಗಿದೆ.

''ಯಾವುದೋ ಒಂದು ಧಾರಾವಾಹಿ ಚೆನ್ನಾಗಿ ಬರುತ್ತಿತ್ತು ಹೇಳದೇ ಕೇಳದೇ ಮಧ್ಯದಲ್ಲಿ ನಿಲ್ಲಿಸಿ ಬಿಟ್ಟರು ಯಾಕೆ?'' ಅದೊಂದು ಧಾರಾವಾಹಿ ನಿಧಾನವಾಗಿ ಕಥೇ ಪ್ರಾರಂಭವಾಗಿ ಚೆನ್ನಾಗಿ ಮುಂದುವರೆಯುತ್ತಿತ್ತು ಆದರೆ ಅವಸರ ಅವಸರವಾಗಿ ಕೊನೆಗೊಳಿಸಿಬಿಟ್ಟರು ಯಾಕೋಪ್ಪ''? ಇಂಥ ಅನೇಕ ಉತ್ತರ ದೊರಕದ ಪ್ರಶ್ನೆಗಳನ್ನು ಧಾರಾವಾಹಿ ನೋಡುಗರು ಅಲ್ಲಲ್ಲಿ ಕೇಳುತ್ತಿರುತ್ತಾರೆ ಇದಕ್ಕೆ ಉತ್ತರವನ್ನು ಸ್ವಲ್ಪ ತರ್ಕದೊಂದಿಗೆ ಚಿಂತಿಸಿದರೆ ಟಿ. ವಿ. ನೋಡುಗರಿಗೆ ಉತ್ತರ ಹೊಳೆಯಬಹುದು.

ನಿಜ. ಇವತ್ತುಟಿ.ವಿ. ಎನ್ನುವ ವ್ಯವಸ್ಥೆ ನಡೆಯುತ್ತಿರುವುದೇ ಸೋಪು ತಯಾರಿಕರಿಂದ ಹಿಡಿದು ಟೂತ್‌ಫೇಸ್ಟ್ ಬ್ರಷ್, ಫೇಸ್‌ಕ್ರೀಂ, ಕಾರು ತಯಾರಿಸುವವರೆಗೆ ಇರುವ ಕಂಪನಿಗಳಿಂದ. ಅವರ ಜಾಹೀರಾತನ್ನು ಹೆಚ್ಚು ಜನ ನೋಡಬೇಕು. ಯಾವ ಧಾರಾವಾಹಿಗಳನ್ನು ಹೆಚ್ಚು ಜನ ನೋಡುತ್ತಿದ್ದಾರೋ ಅದಕ್ಕೆ ಹೆಚ್ಚು ಜಾಹೀರಾತುಗಳು ಸಿಗುತ್ತವೆ. ಚಾನಲ್‌ನ ಒಡೆಯನಿಗೆ ಚಾನಲ್ ನಡೆಸಲು ಈ ಧಾರಾವಾಹಿಗಳಿಗಿಂತ ಜಾಹೀರಾತಿನ ಅಗತ್ಯ ಹೆಚ್ಚು ಇದೆ. ಏಕೆಂದರೆ ಪ್ರತಿ ಸೆಕೆಂಡಿಗೂ ಸಾವಿರಾರು ರೂಗಳ ವ್ಯವಹಾರ ನಡೆಸಲು ಸಾಧ್ಯವಾಗುವುದು. ಇದರಿಂದಲೇ ದುಡ್ಡು ಕೊಟ್ಟುಕೊಳ್ಳುವ ಧಾರಾವಾಹಿಗಳಿಗಿಂತ, ಕಂತೆ ಕಂತೆ ಹಣ ಎಣಿಸಲು ಸಾಧ್ಯ ಮಾಡಿಕೊಡುವ ಜಾಹೀರಾತು ಕಂಪನಿ ಚಾನೆಲ್ ಒಡೆಯನಿಗೆ ಪ್ರಿಯವಾಗುತ್ತದೆ. ಆದ್ದರಿಂದಲೇ ಅವರು ಜಾಹೀರಾತು ಕಂಪೆನಿಯ ದಾಸಾನುದಾಸರಾಗುತ್ತಾರೆ. ಅವರು ನಡೆಸಿದಂತೆ ನಡೆಯುತ್ತಾರೆ, ಕುಣಿಸಿದಂತೆ ಕುಣಿಯುತ್ತಾರೆ ಮೂಲ ವ್ಯವಸ್ಥೆಯೇ ಹೀಗಿರುವಾಗ ''ಮೌಲ್ಯ ಹೆಣ್ಣಿನ ಶೋಷಣೆ'' ಇತ್ಯಾದಿ ಮಾತುಗಳೆಲ್ಲ ಈ ಕಿವಿಗಳಿಗೆ ಹಾಸ್ಯಾಸ್ಪದವಾಗಿ ತೋರುತ್ತದೆ.

ಹತ್ತು ಹದಿನೈದು ಸೆಕೆಂಡ್‌ಗಳಲ್ಲಿ ಬಿತ್ತರವಾಗುವ ಜಾಹೀರಾತುಗಳ ತಯಾರಿಕೆಗೆ ಲಕ್ಷ ಲಕ್ಷಗಟ್ಟಲೇ ಹಣ ಸುರಿಯುತ್ತಾರೆಂದರೆ ಸಾಮನ್ಯರಿಗೆ ಬಹುಶಃ ನಂಬಿಕೆ ಬರಲಿಕ್ಕಿಲ್ಲ. ಆದರೆ ಇದು ನಿಜ. ಈ ಕ್ಷೇತ್ರದ ಹಣದ ವ್ಯವಹಾರದ ಅಂದಾಜು ಸಾಮನ್ಯ ಗೃಹಿಣಿಯರ ನಿಲುಮೆಗೆ ನಿಲುಕದ್ದು. 'ತಾನು ಆಟದಲ್ಲಿ ಆಡಿಗಳಿಸಿದ ಹಣದ ಹತ್ತರಷ್ಟನ್ನು ಕ್ಷೇತ್ರದಲ್ಲಿ ಗಳಿಸಬಹುದು' ಎನ್ನುವ ಅರಿವಿದ್ದಿದ್ದರಿಂದಲೇ ಸಚಿನ್ ತಂಡೋಲ್ಕರ್‌ನಂಥ ಆಟಗಾರನಿಗೆ ಆಟದಿಂದ ಗಳಿಸಿದ ಜನಪ್ರಿಯತೆ ಇಲ್ಲಿ ಬಂಡವಾಳ ಮಾಡಿಕೊಳ್ಳಲು ಸಾಧ್ಯವಾಯಿತು. ಈ ಕ್ಷೇತ್ರ ತುಂಬ ಆಕರ್ಷಕ ಕ್ಷೇತ್ರ ಇಲ್ಲಿ ಸೆಕೆಂಡುಗಳಲ್ಲೇ ವಿಶ್ವದ ದಿಗ್ಗಜರೆಲ್ಲಾ ತಮ್ಮ ಮುಖ ತೂರಿಸುತ್ತಾರೆ. ನೋಡುಗರ ಮನಸ್ಸಿನ ಮೇಲೆ ಮುದ್ರೆಯೊತ್ತುತ್ತಾರೆ.ಈ ಕ್ಷೇತ್ರದಲ್ಲಿ ಮಹಿಳೆ ಸೊಗಸುಗಾತಿಯಂತೆ, ಬೊಂಬೆಯಂತೆ ಪ್ರದರ್ಶಿಸಲ್ಪಡುತ್ತಿದ್ದಾಳೆ. ಅಷ್ಟೇ ಅಲ್ಲಸಮಾಜದಲ್ಲಿ ಅವಳ ಸ್ಥಿತಿಯನ್ನು ಹೀನಾಯವಾಗಿ ಚಿತ್ರಿಸಲಾಗತ್ತಿದೆ.

ಟಿ.ವಿ ಜಾಹೀರಾತು ಎನ್ನುವುದು ಬಹು ಆಕರ್ಷಕವಾದ ಒಂದು ಕಲೆ. ಮೂರು ತಿಂಗಳ ಮಗುವಿನಿಂದ ಹಿಡಿದು ಎಂಬತ್ತರ ವೃದ್ಧರ ವರೆಗೆ ತನ್ನಡೆಗೆ ಸೆಳೆಯಬಲ್ಲ ಸೂಜಿಗಲ್ಲು ಈ ಕಲೆಯಲ್ಲಿದೆ ಅದರ ಶ್ರೀಮಂತ ದೃಶ್ಯಗಳು, ಮಧುರಸಂಗೀತ, ಸುಂದರ ಮಾಡಲ್‌ಗಳು ಒಂದೇ ಕ್ಷಣದಲ್ಲಿ ದಿಗ್ಭ್ರಮೆಯನ್ನು ಹುಟ್ಟಿಸಿಬಿಡುತ್ತದೆ. ಅಳುವ ಮಗು ಅಳು ಮರೆತು ಕಣ್ಣನ್ನೂ ಟಿ.ವಿ. ಯಲ್ಲಿ ನೆಟ್ಟುಬಿಡುತ್ತದೆ. ಒಂದೇ ಸೆಕೆಂಡಿನಲ್ಲಿ ಹತ್ತಾರು ಚಿತ್ರಗಳು ಫಳಫಳನೆ ಮಿಂಚಿ ತಮ್ಮ ಅಸ್ತಿತ್ವವನ್ನು ನೋಡುಗನ ಕಣ್ಣಲ್ಲಿ ನಾಟಿಬಿಡುತ್ತದೆ. ಇಂತಹ ಪ್ರಬಲ ಶಕ್ತಿ ಈ ಕಲೆಗೆ ಇದೆ. ಇದನ್ನು ಬಿಟ್ಟರೆ ಬೇರೆ ಯಾವುದಕ್ಕೂ ಇಂಥ ಚುಂಬಕ ಶಕ್ತಿ ಇಲ್ಲ. ಭಾರತದ ಜಾಹೀರಾತುಗಳೂ ಜಗತ್ತಿನಯಾವುದೇ ದೇಶದ ಜಾಹೀರಾತಿನ ಜೊತೆ ಸ್ಪರ್ಧಿಸಬಲ್ಲ ಕಲಾತ್ಮಕ ಶಕ್ತಿಯನ್ನು ಹೊಂದಿದೆ ಈ ನೆಲದ ಶ್ರೀಮಂತ ಸಂಸ್ಕೃತಿಯನ್ನು ಉಡುಗೆ ತೊಡುಗೆಗಳನ್ನು, ಪ್ರಾದೇಶಿಕತೆಯ ಸೊಗಡನ್ನು, ಹಳೆಬೇರನ್ನು ಹೊಸಚಿಗುರನ್ನು, ಪರಂಪರೆಯ ತಣ್ಣನೆಯ ಜ್ಯೋತಿಯನ್ನೂ, ಪಾಶ್ಚಾತ್ಯ ಥಳಕು ಬೆಳಕಿ ಮಿಂಚನ್ನೂ ಒಟ್ಟಿಗೆ ಮೇಳೈಸಿ ಈ ಜಾಹೀರಾತುಗಳನ್ನು ತಯಾರಿಸಲಾಗುತ್ತದೆ. ಇದರಲ್ಲಿ ಪುಟ್ಟ ಕಥೆಯ ಬೆರೆಗಿದೆ, ಹಾಸ್ಯದ ಮೆರುಗಿದೆ, ಸೌಂದರ್ಯದ ಸೊಬಗಿದೆ, ಚಿತ್ತಾಪಹಾರಿ ಸೆಳತವಿದೆ ಒಂದು ಮಗುವಿನ ಅಳುವನ್ನೋ ನಗುವನ್ನೋ ದಾಖಲಿಸಲು ಇಡೀ ದಿನ ಕಾದು ದುಡಿಯುವ ಬದ್ಧತೆ ಇದೆ.

ತುಂಬ ದುಃಖದ ಸಂಗತಿಯೆಂದರೆ ಇದರ ಸೃಷ್ಟೀಕರ್ತರೂ ಪುರುಷಪ್ರಧಾನ ಸಂಸ್ಕೃತಿಯ ಆರಾಧಕರು. ಈ ಮಂದಿಗೂ 'ಹೆಣ್ಣು ಎಂದರೆ ಇಷ್ಟೆ'ಎನ್ನುವ ಭಾವ. ಬೇರೆಲ್ಲ ವಿಚಾರಗಳಲ್ಲಿ ಅತ್ಯಂತ ವಿಭಿನ್ನವಾಗಿ ಚಿಂತಿಸುವ ಈ ತಲೆಗಳಿಗೆ ಹೆಣ್ಣಿನ ಬಗ್ಗೆ ಮಾತ್ರ ಜಡ್ಡು ಗಟ್ಟಿದ ಪುರಾತನ ಭಾವಗಳೇ ಯಾಕೆ ಬೇಕಾಗುತ್ತವೆಯೋ ಗೊತ್ತಿಲ್ಲ. ಈ ಕಲೆಗೆ ಶೇವಿಂಗ್ ಕ್ರೀಂ ನಿಂದ ಹಿಡಿದು ಪುರುಷರ ಒಳ ಉಡುಪಿನ ವಸ್ತುಗಳ ಜಾಹೀರಾತುಗಳವರೆಗೆ ಹೆಣ್ಣು ಅನಿವಾರ್ಯ! ಆದರೆ ಎಲ್ಲಫ್ರೇಂ

ನಲ್ಲೂ ಮಹಿಳೆಯ ದುರ್ಬಳಕೆಯೇ ಇಲ್ಲಿ ಆಗುತ್ತಿರುವುದು. ಪುರಾತನ ನಂಬಿಕೆಗಳೇ ಇಲ್ಲಿ ಪ್ರತಿಪಾದನೆಗೊಳ್ಳುತ್ತಿರುವುದು. ಮಹಿಳೆಯ ಬುದ್ಧಿಶಕ್ತಿಗೆ ಕರ್ತೃತ್ವ ಶಕ್ತಿಗೆ, ಸಾಹಸ ಪ್ರವೃತ್ತಿಗೆ ವಿಶಾಲ ಮನಸ್ಸಿಗೆ ಇಲ್ಲಿ ಬೆಲೆಯಿಲ್ಲ. ಅವಳ ಅಂದ ಚೆಂದಗಳಿಗೆ, ಗಂಡನ್ನು ಒಲೈಸುವ ರೀತಿಗೆ, ಖಳನಾಯಕಿ ಪ್ರವೃತ್ತಿಗೆ, ಜೊತೆಯಲ್ಲಿ ಅನಿವಾರ್ಯವಾದ ತಾಯ್ತನಕ್ಕೆ ಇಲ್ಲಿ ಮನ್ನಣೆ.

ಪುರುಷರ ಒಳ ಉಡುಪುಗಳ ಜಾಹೀರಾತುಗಳನ್ನೇ ಗಮನಿಸಿ. ಪಕ್ಕದ ಮನೆಯ ನವಯುವಕನೊಬ್ಬ ಕೇವಲ ಒಂದು ಒಂದೇ ಒಳ ಉಡುಪು ತೊಟ್ಟು ವ್ಯಾಯಾಮ ಮಡುತ್ತಿರುತ್ತಾನೆ. ಅದನ್ನು ನೋಡಲು ನೆರೆಮನೆಯ ಯುವತಿಯರು ತಲೆಗೆ ಹೆಲ್ಮೆಟ್ ಧರಿಸಿ ಬೈನಾಕ್ಯುಲರ್ ಹಿಡಿದು ಕೂತುನೋಡಿ ಈ ಭವ್ಯ ದೃಶ್ಯಕ್ಕೆ ಬೆರಗಾಗಿ ಕೆಳಗೆ ಬೀಳುತ್ತಾರೆ ! ಇದು ಎಂಥ ಅಸಹ್ಯ ಮತ್ತು ನಾಚಿಕೆಗೇಡಿನ ಜಾಹೀರಾತು. ಪಕ್ಕದ ಮನೆಯ ಹುಡುಗನ ಒಳ ಉಡುಪುಗಳನ್ನು ಕಾತರದಿಂದ ನೋಡುವಷ್ಟು ನಮ್ಮ ಯುವತಿಯರು ಮತಿಹೀನರಾಗುತ್ತಾರೆಯೇ? ಇದನ್ನು ನೋಡುವ ಮಕ್ಕಳ ಮನದಲ್ಲಿ ಆದರಲ್ಲೂ ಗಂಡುಮಕ್ಕಳ ಮನದಲ್ಲಿ ಹುಡುಗಿಯರ ಬಗ್ಗೆ ಯಾವ ಭಾವ ಬೀಜಾಂಕುರ ವಾಗುತ್ತದೆ? ಮತ್ತು ಹುಡುಗಿಯರ ಬಗ್ಗೆ ಇಂಥ ನಡವಳಿಕೆ ತೋರುಸುವುದು ನಮ್ಮ ಸಂಸ್ಕೃತಿಯೇ?

ಮತ್ತೊಂದು ಒಳ ಉಡುಪಿನದೇ ಜಾಹೀರಾತು ! ಪುರುಷ ಶ್ರೇಷ್ಠ ! (!?) ನೊಬ್ಬ ಸಾರ್ವಜನಿಕ ಶೌಚಾಲಯಕ್ಕೆ ಹೋಗ ಬಯಸುತ್ತಾನೆ. ಅದು ಅತ್ಯಾಧುನಿಕ ಕಟ್ಟಡದಲ್ಲಿದೆ. ಅಲ್ಲಿ women ಎನ್ನುವ ಫಲಕವಿದೆ. ಅದರ ಮೊದಲೆರಡು(wo) ಅಕ್ಷರದ ಮೇಲೆ ಯಾರೋ ಒಂದು ಹ್ಯಾಟು ನೇತುಹಾಕಿ ಅದು ಬರೀ Men ಎಂದು ಕಾಣುವುದರಿಂದ ಈ ಪುರುಷ ಶ್ರೇಷ್ಠ ಅಲ್ಲಿ ಒಳಗೆ ಹೋಗಿದ್ದಾನೆ. ಫುಲ್‌ಸೂಟ್‌ನಿಂದ ಒಳಗೆ ಪ್ರವೇಶಿಸಿದವ ತನ್ನೆಲ್ಲ ಉಡುಪು ಕಳಚಿ ಒಳ ಉಡುಪಿನಲ್ಲಿದ್ದಾನೆ wo ಮೇಲಿದ್ದ ಹ್ಯಾಟು ಕೆಳಗೆ ಬೀಳುತ್ತದೆ ಒಂದು ಗುಂಪು ಹೆಣ್ಣುಗಳು ಒಳ ಪ್ರವೇಶಿಸುತ್ತದೆ ಒಳ ಉಡುಪಿನಲ್ಲಿದ್ದ ಈ ಪುರುಷ ಶ್ರೇಷ್ಠನ ಮೈತುಂಬಾ ತುಟಿಯ (ಲಿಪ್‌ಸ್ಟಿಕ್) ಮುದ್ರೆಯೊತ್ತಿ ನಗುತ್ತಾ ಹೊರಬರುತ್ತದೆ. ಇದು ಯಾವ ಸಂಸ್ಕೃತಿಯನ್ನು ಬಿತ್ತರಿಸುತ್ತದೆ? ಇಲ್ಲಿ ತರ್ಕವೆನ್ನುವುದು ಸತ್ತೇ ಹೋಗಿರುವದು ಯಾಕೆ ನೋಡುಗರಿಗೆ ಗೋಚರವೇ ಆಗುತ್ತಿಲ್ಲ. ಇಲ್ಲಿ ಏಳುವ ಪ್ರಶ್ನೆಗಳನ್ನು ಗಮನಿಸಿ ಇಲ್ಲಿ women ಬೋರ್ಡಿದೆ ಅಂದರೆ ಇದು ಸಾರ್ವಜನಿಕ ಸ್ಥಳ. ಇಲ್ಲಿ wo ಮೇಲೆ ಅದ್ಯಾವ ಮೂರ್ಖ ಹ್ಯಾಟು ಸಿಕ್ಕಿಸಿದ? ಆಯಿತು ಹ್ಯಾಟನಿಂದ ಮುಚ್ಚಿದ wo ಗಮನಿಸದೇ women ಎಂದು ತಪ್ಪು ತಿಳಿದು ಈ ಪುರುಷ ಶ್ರೇಷ್ಠ ಒಳಗೆ ಹೋದ ಎಂತಲೇ ಭಾವಿಸೋಣ ಆದರೆ ಸಾರ್ವಜನಿಕ ಶೌಚಾಲಯದಲ್ಲಿ ಅಷ್ಟೂ ಸೂಟು ಬೂಟುಗಳನ್ನು ಕಳಚಿ ಕೇವಲ ಒಂದು ಒಳ ಉಡುಪಿನಲ್ಲಿ ನಿಂತ ಏಕೆ? ಶೌಚಾಲಯವಿರುವುದು ಕೇವಲ ಧೇಹಬಾಧೆಗಳನ್ನು ತೀರಿಸಲೋ ಅಥವಾ ಅರೆ ಬೆತ್ತಲೆ ನಿಂತು ದೇಹ ಸೌಂದರ್ಯ ವೀಕ್ಷಿಸಲೋ? ಅಲ್ಲಿ ಒಳಹೊಕ್ಕ ಮಹಿಳಾ ಮಣಿಗಳ ಗುಂಪಿಗೆ ನಾಚಿಕೆ ಎನ್ನುವುದೇ ಇಲ್ಲವೇ? ಹಾಗೆ ಸಿಕ್ಕ ಪರಪುರುಷನಿಗೆ ಮೈತುಂಬಾ ಅಧರ ಮುದ್ರೆಯನ್ನು ಒತ್ತಿಯೇ ಬಿಡುತ್ತಾರೆಯೇ? ಇವನೂ ಅದರ ಸವಿಸುಖವನನ್ನುಭವಿಸುತ್ತಾ ಮಲಗಿಯೇ ಬಿಡುತ್ತಾನಲ್ಲ? ಇದು ಯಾವ ಕುಸಂಸ್ಕೃತಿ ? ಇದರಿಂದ ಮಕ್ಕಳ ಮತ್ತು ಹದಿಹರೆಯದ ಮನಸ್ಸಿನ ಮೇಲೆ ಉಂಟಾಗುವ ದುಷ್ಪರಿಣಾಮದ ಬಗ್ಗೆ ಈ ಜಾಹೀರಾತು ತಯಾರಿಕರಿಗೆ, ಅದನ್ನು ಬಿತ್ತರಿಸುವ ಚಾನಲ್ ಮುಖಂಡರಿಗೆ ಏನಾದರೂ ಅರಿವಿದೆಯೇ? ಇಂಥದೇ ಮತ್ತೊಂದು ಟಾಲ್ಕಮ್ ಪೌಡರಿನ ಜಾಹೀರಾತು! ಸಾರ್ವಜನಿಕ ಸ್ಥಳದಲ್ಲಿ ಮೈತುಂಬಾ ಟಾಲ್ಕಮ್ ಪೌಡರ್ ಅನ್ನು ಪೂಸಿಕೊಂಡ ತರುಣನೊಬ್ಬನನ್ನು ಅಪ್ಪಿ ತಮ್ಮ ಕಪ್ಪು ಉಡುಪುಗಳಿಗೂ ಪೌಡರ್ ಮೆತ್ತಿಕೊಂಡುಹೊರ ಬಂದು ಗರ್ವದಿಂದ ಝಾಡಿಸಿಕೊಳ್ಳುವ ತರುಣಿಯರು ಕಡೆಗೊಂದು ಕಪ್ಪು ಬೆಕ್ಕು ! ಇವೆಲ್ಲಾ ಏನೇನು ಭಾವವನ್ನು ಬಿತುತ್ತವೆ? ಯಾವ ಮೌಲ್ಯವನ್ನು ಪ್ರತಿಪಾದಿಸುತ್ತವೆ? ''ಹೆಣ್ಣು ಎಂದರೆ ಗಂಡಸಿನ ಅಂಗಾಂಗಳ ದರ್ಶನಕ್ಕೆ, ಸ್ಪರ್ಶಕ್ಕೆ, ತಬ್ಬುವಿಕೆಗೆ, ಚುಂಬನಕ್ಕೆ ಸದಾ ಕಾತುರಳಾಗಿ ಕಾಯುತ್ತಿರುತ್ತಾಳೆ '' ಎನ್ನುವ ಸಂದೇಶವನ್ನು! ಆದರೆ ನಿಜದಲ್ಲಿ ಹೀಗಿಲ್ಲ ಎನ್ನುವುದನ್ನು ನಮ್ಮ ಮಹಿಳೆಯರು ಅರಿತಿರುತ್ತಾರೆ. ಈ ಅರಿವು ನಮ್ಮ ಪುರುಷ ಬ್ರಹ್ಮರ ನಿಲುಮೆಗೆ ನಿಲುಕುವುದಿಲ್ಲ ಅಷ್ಟೆ. ಆದ್ದರಿಂದಲೇ ಈ ಜನ ಸದಾಕಾಲ ಮಹಿಳೆಯನ್ನು ತಮ್ಮ ಫ್ಯಾನ್‌ಗಳೆಂದು ಚಿತ್ರಿಸುತ್ತಾರೆ.

ಅಷ್ಟೇ ಅಲ್ಲ ಕಾನೂನು ಬಾಹಿರ ಸುದ್ದಿಗಳೂ ಈ ಟಿ.ವಿ. ಜಾಹೀರಾತುಗಳಲ್ಲಿ ಮೌಲ್ಯವಾಗಿ 'ಹೆಣ್ಣಿಗೆ ಅಗತ್ಯ' ವೆನ್ನುವಂತೆ, ಅಸಂಬದ್ಧ ವಿಚಾರಗಳು ಸಹಜವೆನ್ನುವಂತೆ ಬಿತ್ತರವಾಗುತ್ತಿದೆ. ಒಂದುಟೂತ್ ಪೇಸ್ಟ್‌ನ ಜಾಹೀರಾತು ನೋಡಿ, ಇಲ್ಲಿ ಒಬ್ಬ ಪುರುಷ ಶ್ರೇಷ್ಠನಿಗೆ ಇಬ್ಬರೊಂದೇ ರೀತಿ ಇರುವ ಹೆಂಡತಿಯರು! ಈ ಮಹಾಶಯ ಸ್ನಾನಕ್ಕೆ ಹೊರಟರೆ ಒಬ್ಬಳು ಟವೆಲ್ ನೀಡುತ್ತಾಳೆ. ಮತ್ತೊಬ್ಬಳು ಪೇಯ ಸಿದ್ಧ ಪಡಿಸಿ ಕೊಡುತ್ತಾಳೆ ಈ ಶ್ರೇಷ್ಠಸ್ಕೂಟರ್ ಹತ್ತಿ(ಅಂದೆ ಮಧ್ಯಮ ವರ್ಗದವ!) ಆಫೀಸಿಗೆ ಹೊರಡುತ್ತಾನೆ. ಈ ಇಬ್ಬರು ಬಾಲ್ಕನಿಯಲ್ಲಿ ಟಾಟಾ ಮಾಡುತ್ತಾರೆ! ಹಿನ್ನಲೆ ಧ್ವನಿ ಹೇಳುತ್ತದೆ ಅದೂ ಪುರುಷಧ್ವನಿ!'' ಇತ್ತೀಚೆಗೆ ಇದೇ ನಡೆಯುತ್ತಿದೆ (ಅಂದರೆ ಒಬ್ಬನ ಸೇವೆಗೆ ಇಬ್ಬರು ಹೆಂಡಿರ ಅಗತ್ಯ!) ಈ ಜಾಹೀರಾತು ತಯಾರಿಸಿದವರ ತಲೆಗೆ ಏನನ್ನೋಣ? ಇದು ಯುವ ಜನಾಂಗದ ಮೇಲೆ ಎಂಥ ಪರಿಣಾಮ ಬೀರಬಹುದು ಎನ್ನುವುದರ ಬಗ್ಗೆ ಇವರಿಗೆ ಯಾರು ತಿಳಿ ಹೇಳುವವರು ? ಇವರ ತರ್ಕವೆಂದರೆ ಒಬ್ಬ ಪುರುಷ ಹೊರಗೆ ಹೋಗಿ ದುಡಿಯಬೇಕಾದ ಘನಕಾರ್ಯಕ್ಕೆ ಮನೆಯಲ್ಲಿ ಇಬ್ಬರು ಹೆಂಡಿರಸೇವೆ ಅಗತ್ಯವಿದೆ!!

ಹೆಣ್ಣು ಕೂಡಾ

'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯ ಮುಖಪುಟ ನೋಡುತ್ತಲೇ ಅಘಾತವಾಯಿತು. ಇರಾಕಿನ ಜೈಲಿನ ಒಂದು ದೃಶ್ಯ. ಸಂಪೂರ್ಣ ನಗ್ನವಾಗಿಸಿ ನಿಲ್ಲಿಸಿದ ಇರಾಕಿನ ಕೈದಿಯೊಬ್ಬ, ಪಕ್ಕದಲ್ಲಿ ನಿಂತ ನಗ್ನ ಜೊತೆಗಾರರ ಎದುರು, ಬಲವಂತದ ಮುಷ್ಠಿ ಮೈಥುನದಲ್ಲಿ ತೊಡಗಿದ್ದಾನೆ, ಇವನ ಎದುರಿಗೆ ಬಾಯಲ್ಲಿ ಸಿಗರೇಟು ಹಿಡಿದು ನಿಂತ ಮಹಿಳಾ ಯೋಧಳೊಬ್ಬಳು, ಕೈಯನ್ನು ಬಂದೂಕಿನ ಆಕೃತಿಯಲ್ಲಿ ಮಡಚಿ, ಅವನ ಗುಪ್ತಾಂಗಕ್ಕೆ ಗುರಿ ಇಟ್ಟು ಹಲ್ಲು ಕಿರಿಯುತ್ತಾ ನಿಂತಿದ್ದಾಳೆ. ಈಕೆ ಕೇವಲ 21 ವರ್ಷದ ಪ್ರೈವೇಟ್ ಲಿನ್‌ಡೈ ಇಂಗ್ಲೆಂಡ್. ಈಕೆಯ ಮುಖದಲ್ಲಿ ಕಂಡ ವಿಕೃತ ಪೈಶಾಚಿಕ ಖುಷಿ ವಾಕರಿಕೆ ತರಿಸಿತು, ಪ್ರತಿ ಹೆಣ್ಣೂ ತಲೆ ತಗ್ಗಿಸುವಂತೆ ಮಾಡಿತು.

ಮತ್ತೊಂದು ಫೋಟೋದಲ್ಲಿ ಇದೇ ಪ್ರೈವೇಟ್ ಲಿನ್‌ಡೈ, ಕುಸಿದು ಬಿದ್ದ ನಗ್ನ ಇರಾಕಿ ಕೈದಿಯೊಬ್ಬನ ಕುತ್ತಿಗೆಗೆ ಬೆಲ್ಟು ಕಟ್ಟಿ ಕೈಯಲ್ಲಿ ಹಿಡಿದು ಪೋಸ್ ಕೊಟ್ಟಿದ್ದಾಳೆ.

ಇನ್ನೊಂದು ಚಿತ್ರದಲ್ಲಿ ಮಹಿಳಾ ಯೋಧಳೊಬ್ಬಳು, ತನ್ನ ಎದುರಲ್ಲಿ ನಗ್ನವಾಗಿ ಲೈಂಗಿಕ ಕ್ರಿಯೆಗೆ ತೊಡಗಿಸಿದಂತೆ ಪೇರಿಸಿದ ಇರಾಕಿ ಕೈದಿಗಳನ್ನು ಗುಡ್ಡೆ ಹಾಕಿಕೊಂಡು, ಜೊತೆಗಾರನೊಬ್ಬನ ಸೊಂಟ ತಬ್ಬಿ ನಿಂತು, ಬಲಗೈಯಲ್ಲಿ 'ಥಂಬ್ಸ್ ಅಪ್' ಸಂಕೇತ ತೋರಿಸುತ್ತಿದ್ದಾಳೆ. ಈಕೆಯ ಮುಖದಲ್ಲಿ ಊರಗಲ ನಗು. ಈಕೆ 26 ವರ್ಷದ ಸಬ್ರಿನಾ ಹರ್ಮನ್. ಇನ್ನೊಂದು ಚಿತ್ರದಲ್ಲಿ ಸತ್ತು ಬಿದ್ದ ಹೆಣದೊಡನೆ ಫೋಟೋಗೆ ಪೋಸ್ ಕೊಟ್ಟಿದ್ದಾಳೆ. ಮಗದೊಂದು ಚಿತ್ರದಲ್ಲಿ ಈಕೆ ಕೈದಿಯೊಬ್ಬನನ್ನು ಒಂದು ಸಣ್ಣ ಡಬ್ಬದ ಮೇಲೆ ನಿಲ್ಲಿಸಿದ್ದಾಳೆ. ಅವನ ಕೈ ಮತ್ತು ಕಾಲಿನ ಬೆರಳುಗಳಿಗೆ, ಗುಪ್ತಾಂಗಕ್ಕೆ ತಂತಿ ಜೋಡಿಸಿ, ಅವನು ಡಬ್ಬಿಯಿಂದ ಜಾರಿದರೆ ವಿದ್ಯುತ್ ಆಘಾತಕ್ಕೊಳಗಾಗುವನೆಂದು' ಬೆದರಿಸಿದ್ದಾಳೆ !

ಗಮನಿಸಬೇಕಾದದ್ದು, ಇವೆಲ್ಲವೂ ಗುಟ್ಟಾಗಿ ಅತ್ಯಾಚಾರ ನಡೆಯುವಾಗ ಯಾರೋ ಕದ್ದು ತೆಗೆದ ಫೋಟೋಗಳಲ್ಲ. ಬಲು ಹೆಮ್ಮೆಯಿಂದ, ಬಲು ಹಿಗ್ಗಿನಿಂದ ಬೀಗಿ, ತಾವು ಮಾಡಿದ ಘನಕಾರ್ಯವನ್ನು ದಾಖಲಿಸುವಂತೆ, ಪೋಸ್ ಕೊಟ್ಟು ತೆಗೆಸಿಕೊಂಡ ಫೋಟೋಗಳಿವು. ಈ ಮಹಿಳೆಯರು ನಿಂತ ಭಂಗಿ 'ಗೆದ್ದೆವೆಂದು' ತೋರಿಸಿದ ರೀತಿ ಎಲ್ಲವೂ, ಇವರು ತಮ್ಮ ಹಿರಿಯ ಅಧಿಕಾರಿಗಳ ಪೂರ್ಣ ತಿಳುವಿನಲ್ಲೇ, ಬಹುಶಃ ಅವರ ಸೂಚನೆಯಂತೆಯೇ ನಡೆಯುತ್ತಿದ್ದರೆಂಬ ಪೋಸ್ ಕೊಟ್ಟು ನಿಂತು ತೆಗೆಸಿಕೊಳ್ಳುವ ಧೈರ್ಯ ಬರುತ್ತಿರಲಿಲ್ಲ. ತಮ್ಮ ಕೆಲಸದ ಬಗ್ಗೆ ಕೊಂಚವಾದರೂ ಭಯ ಭೀತಿ ನಾಚಿಕೆ, ಸಿಕ್ಕಿ ಬೀಳುವ ಹೆದರಿಕೆ ಇದ್ದಿದ್ದರೆ, ಬೆತ್ತಲೆ ದೇಹಗಳ ಗುಡ್ಡೆ ಏರಿಸಿ ಫೋಟೋ ತೆಗೆಸಿಕೊಳ್ಳುತ್ತಿರಲಿಲ್ಲ. ತಮ್ಮ ಅತ್ಯಾಚಾರಕ್ಕೆ ತಾವೇ ಸಾಕ್ಷಿ ಒದಗಿಸುತ್ತಿರಲಿಲ್ಲ.

ಇದೇ ಜೈಲಿನಲ್ಲಿ ಸದ್ದಾಮ್ ಹುಸೇನ್ ತನ್ನ ರಾಜಕೀಯ ಕೈದಿಗಳನ್ನು ಚಿತ್ರಹಿಂಸೆ ಮಾಡಿ ಕೊಲ್ಲಿಸಿದ್ದ, ಸದ್ದಾಮನ ವಿರುದ್ಧ ಸಮರ ಸಾರಿದ ಅಮೆರಿಕ, ಇರಾಕಿನ ಜನತೆಗೆ ನೀಡಿದ್ದೇನು ? ನೆಲಸಮವಾದ ದೇಶ ಮತ್ತು ಓರ್ವ ಸದ್ದಾಮನಿಗೆ ಬದಲಾಗಿ, ನೂರಾರು ಸದ್ದಾಮರನ್ನು ತಂದು ಬಿಟ್ಟಿದೆ.

ಇಷ್ಟೆಲ್ಲ ಅವ್ಯವಸ್ಥೆಯು ಜೈಲುಗಳ ಹೊಣೆಗಾರಿಕೆ ಹೊತ್ತವಳೂ ಮಹಿಳೆಯೇ. ಕಳೆದ ಜೂನ್ ತಿಂಗಳಿನಲ್ಲಿ, ಅಮೆರಿಕದ ಭೂಸೇನೆಯ ರಿಸರ್ವ್ ಬ್ರಿಗೇಡ್‌ಯರ್ ಜನರಲ್ ಜಾನಿಸ್ ಕಾರ್ಪಿನ್‌ಸ್ಕಿಯನ್ನು, 800ನೇ ಮಿಲಿಟರಿ ಪೋಲೀಸ್ ಬ್ರಿಗೇಡ್‌ನ ಕಮಾಂಡರ್ ಆಗಿ ನೇಮಿಸಲಾಯಿತು. ಯುದ್ಧಭೂಮಿಯಲ್ಲಿ ಕಮಾಂಡರ್ ಆದ ಏಕೈಕ ಮಹಿಳೆ ಈಕೆ. 1991ರ ಗಲ್ಫ್‌ಯುದ್ಧದಲ್ಲಿ ಭಾಗ ವಹಿಸಿದ್ದಳು. ಈಕೆಯ ಅಡಿಯಲ್ಲಿ ಇರಾಕಿನ ಮಿಲಿಟರಿ ಜೈಲುಗಳಿದ್ದವು.

ಇವು 'ಅನಾಗರೀಕ', ಹಿಂದುಳಿದ, ಆತಂಕವಾದಿ' ಎಂದು ಹೆಸರು ಕಟ್ಟಿದ ದೇಶದ ಯೋಧರಿಂದ ಜರುಗಿದ ಅತ್ಯಾಚಾರಗಳಲ್ಲ. ಜೈಲುಗಳಲ್ಲಿ ಚಿತ್ರ ಹಿಂಸೆ ಹೊಸತಲ್ಲದಿರಬಹುದು. ಆದರೆ ಇಡೀ ಜಗತ್ತಿಗೆ ಮಾನವ ಹಕ್ಕುಗಳ ಬಗ್ಗೆ ಉದ್ದಂಡ ಭಾಷಣ ಬಿಗಿಯುವ, ಇಡೀ ಜಗತ್ತಿಗೆ 'ತಾವೆಷ್ಟು ನಾಗರಿಕ'ರೆಂದು ತೋರಿ ಮೆರೆಯುವ ಅಮೆರಿಕ, ತನ್ನ ನೆಲದ ಹೆಣ್ಣುಗಳು ಕೂಡಾ ಎಷ್ಟು ಅನಾಗರೀಕವಾಗಿ, ಕ್ರೂರವಾಗಿ, ವಿಕೃತವಾಗಿ, ಕಾಮಕೇಳಿಯಿಂದ ವರ್ತಿಸಬಲ್ಲರು ಎಂದು ಚೀರಿ ತೋರಿಸಿದೆ. ಚಿತ್ರಹಿಂಸೆಗಳು ಗುಟ್ಟಾಗಿ ನಡೆಯುತ್ತವೆ, ಕಾರಣ ಅವು ಪ್ರದರ್ಶನದ ವಸ್ತುವಲ್ಲ ಎಂದು ಚಿತ್ರ ಹಿಂಸೆ ಮಾಡುವವರಿಗೂ ಗೊತ್ತಿರುತ್ತದೆ. ಆದರೆ ಫೋಟೋಗೆ ಪೋಸ್ ಕೊಟ್ಟು ನಿಂತು, ಹಲ್ಲು ಕಿರಿದ ಖುಷಿಯ ಮುಖಗಳನ್ನು ನೋಡಿದರೆ ಇದೇನೂ ಇವರಿಗೆ ಹೊಸತಾಗಿಯಾಗಲಿ, ನಾಚಿಗೆಗೇಡಿನದಾಗಿ ಆಗಲಿ ಕಂಡು ಬರುವುದಿಲ್ಲ. ಗೆದ್ದ ಖುಷಿಯಲ್ಲಿ 'ಥಂಮ್ಸ್ ಅಪ್' ಸಂಕೇತ ತೋರಿಸಿದ ರೀತಿ ನೋಡಿದರೆ. ಅವರಿಗೆ ನೀಡಿದ ಆದೇಶವೇ ಇಂತಹ ನಡತೆಯನ್ನು ಪ್ರೋತ್ಸಾಹಿಸಿತ್ತು ಎಂಬ ಗಾಢ ಅನುಮಾನವನ್ನು ಮೂಡಿಸುತ್ತದೆ. ತಮ್ಮ ಮಹತ್ತರ ಕಾರ್ಯದ ಪುರಾವೆಯಾಗಿ ಫೋಟೋ ತೆಗೆಸಿಟ್ಟುಕೊಂಡು, ಮುಂದೆ ಬರು

ವ ಬಡ್ತಿ ಪ್ರಶಸ್ತಿಗೆ ಕಾದಿರಿಸಿದ್ದರೆ ಎಂಬ ಅನುಮಾನ ಬರುತ್ತದೆ.

ಸಬ್ರಿನಾ ಹರ್ವರ್ನ್, 'ಜೈಲಿನಲ್ಲಿ ಯಾವುದೇ ನಿಯಮಗಳಿರಲ್ಲ' ಎಂದಿದ್ದಾಳೆ. ಈಕೆಗೆ 'ಜಿನೇವಾ ಕನ್ವೆನ್‌ಷನ್, ಎಂದರೇನು, ಅದರ ಪ್ರಕಾರ ಯುದ್ಧ ಕೈದಿಗಳೊಡನೆ ಹೇಗೆ ವರ್ತಿಸಬೇಕು, ಅದಕ್ಕೆಲ್ಲ ನಿಯಮಗಳಿವೆ ಎಂದೂ ಗೊತ್ತಿರಲಿಲ್ಲ. ಇವೆಲ್ಲವೂ ತನ್ನ ಹಿರಿಯ ಅಧಿಕಾರಿಯು ಆದೇಶದಂತೆಯೇ ತಾನು ಮಾಡಿದ್ದು, ಕೈದಿಗಳಿಗೆ ಜೈಲನ್ನು ನರಕವಾಗಿಸಬೇಕೆಂದು ನನಗೆ ಆದೇಶವಿತ್ತು' ಎನ್ನುತ್ತಾಳೆ. ಇವೆಲ್ಲವೂ ಸಿ.ಐ.ಎ.ಯ ಕೃಪಾಕಟಾಕ್ಷದಲ್ಲಿಯೇ, ಬಹುಶಃ ಅದರ ತರಪೇತಿನಲ್ಲೇ ನಡೆದಿದ್ದರೆ ಅಚ್ಚರಿ ಇಲ್ಲ.

ಅತ್ಯಂತ ಅಪಮಾನಕರ, ಲೈಂಗಿಕ ಹಿಂಸೆಯ ದೌರ್ಜನ್ಯದ ಭಯಾನಕ ಚಿತ್ರಗಳನ್ನು ನೋಡಿದರೆ, ಇದು ಕೇವಲ ಕೆಲವು ಯೋಧರ ವಿಕೃತ ಕೃತ್ಯವಲ್ಲ, ಅಮೆರಿಕದ ತನಿಖಾ ವೈಖರಿಯೇ ಇದಾಗಿತ್ತೆ ಎಂಬ ಪ್ರಶ್ನೆ ಮೂಡುತ್ತದೆ. ಪುರುಷರೊಡನೆ ಮಹಿಳಾ ಯೋಧರು ಇಷ್ಟು ಅಮಾನುಷವಾಗಿ ನಡೆದುಕೊಳ್ಳ ಬಲ್ಲರಾದರೆ, ಇನ್ನು ಮಹಿಳಾ ಕೈದಿಗಳೊಡನೆ ಅಮೆರಿಕದ ಪುರುಷ ಯೋಧರು ಹೇಗೆ ನಡೆದುಕೊಂಡಿರಬಹುದೆಂದು ಊಹಿಸಿದರೇ ಮೈ ನಡುಗುತ್ತದೆ.

ಯಾವುದೇ ದೇಶದ ಸೇನೆ, ತನ್ನ ಯೋಧರಿಗೆ ಶಿಸ್ತನ್ನು ಕಲಿಸುತ್ತದೆ. ದೇಶರಕ್ಷಣೆಯನ್ನು ಕಲಿಸುತ್ತದೆ, ದೇಶಕ್ಕೆ ಆಪತ್ತು ಒದಗಿದಾಗ, ಜೀವವನ್ನು ಪಣವಿಟ್ಟಾದರೂ ತಾಯ್ನಾಡನ್ನು ಕಾಪಾಡುವುದನ್ನು ಕಲಿಸುತ್ತದೆ ಎಂದು ತಿಳಿದಿದೆ. ಆದರೆ ಅಮೆರಿಕದ ಸೇನೆ ಕಲಿಸುವುದೇ ಬೇರೆ ಎಂದು ಈಗ ಅನಿಸುತ್ತದೆ, ಕಾರಣ ಅಮೆರಿಕದ ಸೇನೆಗೆ ದೇಶರಕ್ಷಣೆಯ ಗುರಿಯಿಲ್ಲ. ಸರಿಸಮಾನರಿಲ್ಲದ ದೊಡ್ಡಣ್ಣನಿಗೆ, ಅಸ್ತ್ರಶಸ್ತ್ರಗಳ ವ್ಯಾಪಾರದ ಲಾಭಕೋರತನವೇ ಗುರಿಯಾಗಿದ್ದು, ಬಡದೇಶಗಳ ಸಂಪನ್ಮೂಲಗಳನ್ನು ದೋಚುವುದೇ ಉದ್ದೇಶವಾಗಿದ್ದು, ತನ್ನ ಯೋಧರಿಗೆ 'ಆಕ್ರಮಣಶೀಲತೆಯನ್ನೇ ಬೋಧಿಸಿ, ವಿಕೃತ ಖುಷಿಯನ್ನೇ ಕಲಿಸುತ್ತದೆ' ಎಂಬ ಅನುಮಾನ ಬಲವಾಗುತ್ತಿದೆ. ಇಂತಹ ವ್ಯವಸ್ಥೆಯಲ್ಲಿ ಹೆಣ್ಣು ಕೂಡಾ, ಅಮಾನುಷ ಕ್ರೌರ್ಯವನ್ನು, ವಿಕೃತವನ್ನು ಮೆರೆಯಬಲ್ಲಳು ಎನ್ನುವುದಕ್ಕೆ 21 ವರ್ಷದ ಲಿನ್‌ಡೈ, 26 ವರ್ಷದ ಸಬ್ರಿನಾ ಸಾಕ್ಷಿಯಾಗಿದ್ದಾರೆ.

'ಆತಂಕವಾದದ ವಿರುದ್ಧದ ಸಮರ' ಎಂದು ಸಾರಿ ಜಗತ್ತಿನ ದೊಡ್ಡ ಆತಂಕವಾದಿರಾಷ್ಟ್ರವಾಗಿರುವ ಅಮೆರಿಕ,1991ರ.ಗಲ್ಫ ಯುದ್ಧದಲ್ಲಿ ಸುರಿದ ಗುಂಡಿನ ಮಳೆಯೆಷ್ಟು ಎಂದು ಗೊತ್ತೆ? 210,004 ಐರನ್ ಬಾಂಬುಗಳು, 9342 ಗೈಡೆಡ್ ಬಾಂಬುಗಳು, 2039 ಆ್ಯಂಟಿ ರೇಡಿಯೇಷನ್ ಕ್ಷಿಪಣಿಗಳು, 5,448 ಆಕಾಶದಿಂದ ನೆಲಕ್ಕೆಸೆಯುವ ಕ್ಷಿಪಣಿಗಳು ... ಪಟ್ಟಿ ಉದ್ದವಿದೆ. ಎಲ್ಲಾ ಸೇರಿ ಸುಮಾರು 220 ಕೋಟಿ ಡಾಲರ್ ಮೊತ್ತದ ಬೆಂಕಿಯ ಮಳೆ ಸುರಿಯಿತು. ಮತ್ತೊಂದು ಇರಾಕ್ ಯುದ್ಧ ಮುಗಿದರೂ, ಗುಂಡಿನ ಮಳೆಯನ್ನೂ ಇರಾಕಿನ ಮೇಲೆ ನಿಂತಿಲ್ಲ. ಈ ಯುದ್ಧದಲ್ಲಿ ಅಮೆರಿಕ ಬಳಸಿದ ಕ್ಷಿಪಣಿಗಳೆಷ್ಟು, ಬಾಂಬುಗಳೆಷ್ಟು ಎಂಬ ಲೆಕ್ಕ ಸದ್ಯಕ್ಕೆ ದಕ್ಕದಿದ್ದರೂ, ಇರಾಕಿಗೆ ಇರಾಕೆ ಹೊತ್ತಿ ಉರಿಯುತ್ತಿದ್ದ ದೂರದರ್ಶನದ ಚಿತ್ರಗಳನ್ನು ನೋಡಿಯೇ, ಅದನ್ನು ಊಹಿಸಬಹುದು. 'ಏರ್ ಶೋ' ಗಳಲ್ಲಿ ವಿಮಾನ ಮಾರಾಟದ ತಂತ್ರವಾಗಿ ವಿಮಾನದ ಪ್ರದರ್ಶನಗಳು ನಡೆಯುವಂತೆ, ತಮ್ಮ ಅಸ್ತ್ರಶಸ್ತ್ರಗಳ ಪ್ರದರ್ಶನಕ್ಕೆ, ಇಂತಹ ಯುದ್ಧಗಳು ಬಲು ಉಪಯೋಗಿ.

ಸದ್ದಾಮನ ನೆಪ ಹಿಡಿದು 'ಸಮೂಹ ನಾಶದ ಅಸ್ತ್ರ'ಗಳ ಆಪಾದನೆ ಹೇರಿ, ಇಂದು ಇರಾಕಿನ ಮೇಲೆ ಬಾಂಬಿನ ಬಳೆಗರೆದು ಸಮೂಹ ನಾಶ ಮಾಡಿರುವುದು ನಿಜಕ್ಕೂ ಅಮೆರಿಕ. ಈ ಬಾರಿಯ ಇರಾಕಿನ ಮೇಲಿನ ಹೈಟೆಕ್ ದಾಳಿಯಲ್ಲಿ, ಅಮೆರಿಕ ಸುಮಾರು 600 ಜನ 'ಎಂಬೆಡೆಡ್ ಪತ್ರಿಕೋದ್ಯಮಿ' ಗಳನ್ನು ಕರೆದೊಯ್ದಿತ್ತು. ತಮ್ಮ ದೃಷ್ಟಿಕೋನದ ಯುದ್ಧವನ್ನು ತೋರಿಸಿದ ಹಿರಿಮೆ ಗರಿಮೆ ಅಮೆರಿಕಗಿದೆ. ಪೂರ್ವಗ್ರಹದಿಂದ ಮುಕ್ತರಾಗಿ 'ನ್ಯೂಟ್ರಲ್' ಇರಬೇಕಾದ ಪತ್ರಿಕೋದ್ಯಮಿಗಳು, ದೊಡ್ಡಣ್ಣನೊಡನೆಯೇ ಇದ್ದು ಮಲಗಿ, ಅವನ ಸುರಕ್ಷಿತ ಛಾದರದಡಿಯಿಂದ ಅಮೆರಿಕ ಹೇಳಿದ 'ಕತೆಗಳನ್ನೇ ವರದಿ' ಎಂದು ಒಪ್ಪಿಸಿದರು. ಮತ್ತೊಂದು ಕಣ್ಣಿನ ನೋಟವನ್ನು ಅರಬ್ ದೂರದರ್ಶನ ಚಾನೆಲ್‌ಗಳು ತೋರಿಸ ತೊಡಗಿದೊಡನೆ, 'ಫ್ರೀ ಪ್ರೆಸ್' ಸ್ವಾತಂತ್ರ್ಯದ ಬಗ್ಗೆ ಮಾತನಾಡುವ ಅಮೆರಿಕ, ಅರಬರ ಪತ್ರಿಕೋದ್ಯಮಿಗಳನ್ನೇ ಗುರಿಯಿಟ್ಟು ಗುಂಡಿಟ್ಟು ಕೊಂದಿತು. ಈ ಬಾರಿಯ ಯುದ್ಧದಲ್ಲಿ ಬಳಸಿದ ಅಸ್ತ್ರಗಳೆಷ್ಟು, ಎಂತಹುವು ಯಾರಿಗೆ ಗೊತ್ತು ? ಈ ಬಾರಿ ನ್ಯೂಟ್ರಾನ್ ಬಾಂಬ್ ಬಳಸಿದರು ಎಂಬ ಸುದ್ದಿ ಇದೆ. ಕಟ್ಟಡಗಳಿಗೆ ಕೊಂಚವು ಹಾನಿ ಮಾಡದ, ಮನುಷ್ಯರನ್ನು ಮಾತ್ರ ಬೂದಿಯಾಗಿಸುವ ಬಾಂಬುಗಳ ಪ್ರಯೋಗವಾಯಿತೆಂಬ ಅನುಮಾನವಿದೆ. ಅಮೆರಿಕ ಮಾಡಿರುವ ಅನಾಚಾರಗಳು ಸಂಪೂರ್ಣವಾಗಿ ಹೊರಬರಲು ವರ್ಷ ವರ್ಷಗಳೇ ಬೇಕಾಗಬಹುದು. ಇರಾಕ್, ಪ್ಯಾಲೆಸ್ಟೈನ್‌ನಂತಹ ಬಡದೇಶಗಳ 'ಆತಂಕವಾದಿ'ಗಳು ಅಷ್ಟು ಅಪಾಯಕಾರಿ ಇಲ್ಲದಿರಬಹುದು, ಅವರು ಕೇವಲ ತಮ್ಮ ದೇಹವನ್ನಷ್ಟೇ ಸಿಡಿಸಿ ಆತಂಕವೆಬ್ಬಿಸುತ್ತಾರೆ. ಆದರೆ ಅಸ್ತ್ರ ಶಸ್ತ್ರತಯಾರಿಕೆಯನ್ನೇ ಲಾಭದಾಯಕ ಉದ್ಯಮ ಮಾಡಿಕೊಂಡ ಅಮೆರಿಕದ ಆತಂಕವಾದ, ಬಲು ಅಪಾಯಕಾರಿ. ಇಂತಹ ಕೆಲಸಕ್ಕೆ ಅಮೆರಿಕದೆಲ್ಲ ಪ್ರಜೆಗಳ ಒಪ್ಪಿಗೆ ಇದೆ ಎಂದು ನಾನು ಅನುಮಾನಿಸುವುದಿಲ್ಲ. ಅಮೆರಿಕದ ಜನತೆ ತಾವು 'ಇಂತಹ ಯುದ್ಧಕೋರ ಸರಕಾರದ ಪರ ಇಲ್ಲ' ಎನ್ನುವುದನ್ನು ಬಹುಶಃ

ಬರುವ ಚುನಾವಣೆಯಲ್ಲಿ ಸ್ಪಷ್ಟಪಡಿಸಬೇಕಾಗಿದೆ. ಇಂದು ತಮ್ಮ ದೇಶದ ಯೋಧರು ಇರಾಕಿನಲಿ ಮಾಡಿರುವ ಅತ್ಯಾಚಾರವನ್ನು ತೋರಿಸಿದ್ದೂ ಅಮೆರಿಕದ ಡ್ಯಾನ್ ರಾತೆರ್ ಎಂಬ ಪತ್ರಿಕೋದ್ಯಮಿ. ಈತ ಹಣದ ಲಾಭಕ್ಕೆ, ಪ್ರಸಿದ್ಧಿಯ ಆತುರಕ್ಕೆ ಈ ಕೆಲಸ ಮಾಡಿಲ್ಲ ಅಮೆರಿಕನ್ ಜನತೆಯ ಒಟ್ಟು ಪಾಪಪ್ರಜ್ಞೆಯ ಪಾಶ್ಚಾತ್ತಾಪದ ಸಾಕ್ಷಿಯಾಗಿ, ಈತ ತನ್ನ ದೇಶದ ಅನಾಚಾರಗಳನ್ನು ಹೊರಹಾಕಿದ್ದಾನೆ ಎಂದು ಸದ್ಯಕ್ಕೆ ಭಾವಿಸೋಣ. ಸರಕಾರ ತನ್ನ ಉದ್ದೇಶವನ್ನು, ಕ್ರೌರ್ಯವನ್ನು ಮರೆಮಾಚಿ, ತನ್ನ ಪ್ರಜೆಗಳನ್ನು ಅಜ್ಞಾನದಲ್ಲಿಯೇ ಇಡುವ ಹಿನ್ನೆಲೆಯಲ್ಲಿ ಅಮೆರಿಕನ್ ಪ್ರಜೆಗಳು' ಬುಷ್‌ನ ಯುದ್ಧಕೋರತನದ ಬೆಂಬಲಿಗರು' ಎಂದು ಭಾವಿಸುವುದು ಸರಿಯಲ್ಲ.

ಇಷ್ಟೆಲ್ಲ ಆಘಾತಕಾರಿ ವರದಿಗಳಾದ ಇಂತಹ ಸಮಯದಲ್ಲಿ ನಮ್ಮ ಭಾರತದ ಪತ್ರಿಕೆಗಳು, ರಾಜಕೀಯ ಮುಖಂಡರು ಪಿಸು ಮಾತಿಲ್ಲದೆ ಇರುವುದು ಅಚ್ಚರಿ ತರಿಸುತ್ತದೆ. ರೋಚಕ ಚಿತ್ರಗಳನ್ನು ಎಲ್ಲಾ ಪತ್ರಿಕೆಗಳು ಪ್ರಕಟಿಸಿದವು ನಿಜ, ಆದರೆ ಬೆರಳೆಣಿಕೆಯಷ್ಟು ಪತ್ರಿಕೆಗಳನ್ನು ಬಿಟ್ಟರೆ, ಅತ್ಯಾಚಾರಕ್ಕೆ ವಿರುದ್ಧ ಸಿಡಿದೆದ್ದ ಬೃಹತ್ ಪ್ರತಿಕ್ರಿಯೆ ಕಂಡು ಬರಲಿಲ್ಲ. ಪತ್ರಿಕೆಗಳು ಜನಾಭಿಪ್ರಾಯವನ್ನು ರೂಪಿಸಬಲ್ಲವು, ಜನತೆಗೆ ಸತ್ಯಾಸತ್ಯಗಳನ್ನು ತಿಳಿಸಿ ತೆರೆದಿಡಬಲ್ಲವು. ಅಮೆರಿಕದ ಸಿ.ಬಿ.ಎಸ್. ಪತ್ರಿಕೋದ್ಯಮಿ ವಾಲ್ಟರ್ ಕ್ರಾನ್‌ಕೈಟ್, ಅಮೆರಿಕದ ಜನತೆ ತಮ್ಮ ಸರಕಾರ ವಿಯಟ್ನಾಂನಲ್ಲಿ ಮಾಡಿದ ಅನಾಚಾರದ ವಿರುದ್ಧ ಸಿಡಿದೇಳುವಂತೆ ಎಚ್ಚರಿಸಿದ ಇತಿಹಾಸವನ್ನು ಮರೆಯುವಂತಿಲ್ಲ.

ಈ ಜೈಲುಗಳಲ್ಲಿ ಮತ್ತೇನೆಲ್ಲ ನಡೆಯಿತು, ಈ ಯುದ್ಧದಲ್ಲಿ ಎಂತಹ ಅಪಾಯಕಾರಿ ಅಸ್ತ್ರಗಳು ಪ್ರಯೋಗವಾದುವು ಎಂಬುದು ದೂರದ ಭವಿಷ್ಯದಲ್ಲಿ ನಮಗೆ ತಿಳಿದು ಬರುವುದು. ಪ್ರಜಾಪ್ರಭುತ್ವ, ಮಾನವ ಹಕ್ಕು, ಆತಂಕವಾದದ ವಿರುದ್ಧ ಸಮರ ಎಂಬ ದೊಡ್ಡ ದೊಡ್ಡ ಪದಗಳನ್ನು ಉಪಯೋಗಿಸುವ ಹಕ್ಕನ್ನೂ ಅಮೆರಿಕ ಇಂದು ಕಳೆದುಕೊಂಡಿದೆ. ಇಷ್ಟಾದರೂ ಕಾಲಿನ್ ಪಾವೆಲ್ 'ಇರಾಕಿನಲ್ಲಿ ತಪ್ಪಾದುದೇನೂ ನಡೆದಿಲ್ಲೆಂದು ಹೇಳಿದ್ದಾನೆ. ಇರಾಕಿನ ಜನತೆಗೆ ' ಸಾರಿ' ಎಂದು ತುಟಿಸಂತಾಪ ತೋರಿದ ಬುಷ್, 'ಡಿಫೆನ್ಸ್ ಸೆಕ್ರೆಟರಿ ರಮ್ಸ್‌ಫೆಲ್ಡ್‌ಗೆ ' ಬಲು ಚೆನ್ನಾಗಿ ಕೆಲಸ ಮಾಡಿದೆ. ಇರಾಕಿನಲ್ಲಿ ವೀರೋಚಿತ ಮುಖಂಡನಾಗಿ ಆತಂಕವಾದದ ವಿರುದ್ಧದ ಯುದ್ಧ ಮಾಡಿದೆ' ಎಂದು ಬೆನ್ನು ತಟ್ಟಿದ್ದಾರೆ. 'ತಮ್ಮಿಂದ ಆಗಬಾರದ್ದೇನೂ ಆಗಿಲ್ಲ' ಎಂಬ ಧೋರಣೆಯಲ್ಲಿ ತಪ್ಪುಗಳನ್ನು ಒಪ್ಪಿಕೊಳ್ಳದ ಭಂಡತನವನ್ನೇ ಸದ್ಯಕ್ಕೆ ಅಮೆರಿಕ ಮೆರೆಯುತ್ತಿದೆ.

ಇಂದು ಜಗತ್ತಿನ ಮುಂದಿರುವುದು ಕೆಲವು ಫೋಟೋಗಳು ಮಾತ್ರ. ಇಂತಹ ಸಾವಿರಾರು ಫೋಟೋಗಳಿದ್ದು ಅದೆಂತಹ ಭಯಂಕರ ದೌರ್ಜನ್ಯಗಳು ಜೈಲಿನಲ್ಲಿ ಜರುಗಿರಬೇಕು ಎಂಬುದು ಊಹೆಗೆ ಬಿಟ್ಟದ್ದು. ಇರಾಕಿನ ಪುರುಷ ಕೈದಿಗಳು ಇಷ್ಟು ಬಗೆಯ, ಲೈಂಗಿಕ ದೌರ್ಜನ್ಯ ಮತ್ತು ಹಿಂಸೆಗೆ ಮಹಿಳಾ ಯೋಧರ ಕೈಯಲ್ಲಿ ಗುರಿಯಾದರೆ, ಇಂತಹ ಇರಾಕಿನ ಜೈಲುಗಳಲ್ಲಿ ಅಮೆರಿಕದ ಪುರುಷ ಯೋಧರ ಕೈಯಲ್ಲಿ ಇರಾಕಿನ ಮಹಿಳೆಯರ ಪಾಡೇನೆಂದು ಊಹಿಸಿಕೊಳ್ಳಬಹುದು. ಅದಾಗಲೇ ಜೈಲಿನಲ್ಲಿ ಇರಾಕಿ ಹೆಂಗಸರ ಮೇಲಾದ ಅತ್ಯಾಚಾರಗಳು ಹೊರಬರುತ್ತಿವೆ. ಹೆಂಗಸರನ್ನು ಬೆತ್ತಲೆಯಾಗಿಸಿ, ಸೈನಿಕರು ಅತ್ಯಾಚಾರ ಎಸಗಿದ್ದು ವರದಿಯಾಗುತ್ತಿದೆ. ಹೆಣ್ಣಿನ 'ಶೀಲ' ದ ಪವಿತ್ರತೆಯ ಬಗ್ಗೆ ಬಲು ಒತ್ತಡವಿರುವ ಇಸ್ಲಾಮಿಕ್ ಸಮಾಜದಲ್ಲಿ, ಅತ್ಯಾಚಾರಕ್ಕೆ ಗುರಿಯಾದ ಹೆಣ್ಣಿಗೆ ಜೈಲಿನಿಂದ ಹೊರಬಂದಾಗ ಎಂತಹ ದುರ್ಗತಿ ಕಾದಿರುವುದೆಂದು ತಿಳಿದ ವಿಷಯ. ಎಷ್ಟೋ ಸಂದರ್ಭದಲ್ಲಿ 'ಮನೆತನದ ಮಾನ ಹೋಯಿತೆಂದು' ಅತ್ಯಾಚಾರಕ್ಕೆ ಒಳಗಾದ ಪಾಪದ ಹೆಣ್ಣುಗಳನ್ನು ಮನೆಯವರೇ ಮುಗಿಸಿದ್ದುಂಟು. ಇರಾಕಿನ ಜೈಲಿನಲ್ಲಿ ಮಹಿಳೆಯರ ಮೇಲೆ ನಡೆದ ಅತ್ಯಾಚಾರದ ಪೂರ್ಣ ಸ್ವರೂಪ ನಮಗೆಂದೂ ತಿಳಿಯದೆ ಹೋಗಬಹುದು. ಹೊರಗೆ ಬಂದ ಮಹಿಳೆಯರು ತಮ್ಮ ಮೇಲಿನ ಹಿಂಸೆ ದೌರ್ಜನ್ಯವನ್ನು ಹೇಳಿಕೊಳ್ಳಲಾರರು. ಅದಾಗಲೇ ಅಮೆರಿಕದ ಭೂಸೇನೆಯ ಅಧಿಕಾರಿಗಳ ಬಾಯಿಂದಲೇ 'ಲೈಂಗಿಕ ಅಪಮಾನ, ವಿಚಾರಣೆ ಮಾಡುವ ಒಂದು ಪರಿಣಾಮಕಾರಿ ವಿಧಾನ' ಎಂಬ ಸಮರ್ಥನೆಗಳು ಕೇಳಿ ಬರುತ್ತಿವೆ. ಅಂದರೆ, ಇದು ಕೆಲವು ಸೈನಿಕರ ತಲೆಕೆಟ್ಟ ಕೆಲಸವಲ್ಲ, ಅಮೆರಿಕದ ತನಿಖಾ ವಿಧಾನ ಮತ್ತು ತರಪೇತು ಈ ಬಗೆಯದೆಂಬ ವಾದಕ್ಕೆ ಮತ್ತಷ್ಟು ಪುಷ್ಟಿ ದೊರೆಯುತ್ತಿದೆ.

ಮೊನ್ನೆ ಮೇ 14 ರಂದು, ಬಾಗ್ದಾದಿಗೆ ಭೇಟಿಕೊಟ್ಟ ಡಿಫೆನ್ಸ್ ಸೆಕ್ರೆಟರಿ ಡೊನಾಲ್ಡ್ ರಮ್ಸ್‌ಫೆಲ್ಡ್' ಈ ಯೋಧರನ್ನು ಶಿಕ್ಷಿಸುತ್ತೇವೆ, ನಿಮಗೆ ನ್ಯಾಯ ಒದಗಿಸುತ್ತೇವೆ. ಜಗತ್ತು ಸ್ವತಂತ್ರ ಪ್ರಜಾಪ್ರಭುತ್ವ ದೇಶ ಹೇಗೆ ಕೆಲಸ ಮಾಡುತ್ತಿದೆ ಎಂದು ಇಡೀ ಜಗತ್ತೇ ನೋಡಿಯಾಗಿದೆ. ಇರಾಕಿನ ಜನತೆ ತಮ್ಮ ಮೇಲೆ ಹೇರಿ ಬಿದ್ದ ಸದ್ದಾಮನನ್ನೂ ಮೀರಿಸಿದ ಬುಷ್‌ನ ಸೇನೆಯನ್ನು ಬಡಿದೋಡಿಸಿ ಸ್ವಾತಂತ್ರ ಪಡೆಯಬೇಕಿದೆ. ಅದರೊಡನೆಯೆ ಅಮೆರಿಕದ ಪ್ರಜೆಗಳು ತಮ್ಮ ಹೆಣ್ಣು ಗಂಡು ಮಕ್ಕಳನ್ನು 'ಮಿಲಿಟರಿ ತರಪೇತಿನ ಹೆಸರಲ್ಲಿ ರಾಕ್ಷಸರನ್ನಾಗಿಸಿ, ಪರದೇಶಗಳಲ್ಲಿ ಯುದ್ಧಗಳಿಗೆ ಕಳುಹಿಸಿ, ಜೀವ ತೆಗೆಯುವ' ಯುದ್ಧಕೋರ ಸರಕಾರದಿಂದ ಬಿಡುಗಡೆ ಪಡೆಯಬೇಕಿದೆ. ○

ಹೆಣ್ಣನ್ನು ಹರಾಜು ಹಾಕಿದ ಭೂಪರು

– ಶತಭಿಷ

ನೆಲವನ್ನು ಪುಣ್ಯಭೂಮಿ ಎಂದು ಕರೆದ, ದೇಶವನ್ನು 'ಭಾರತಮಾತೆ' ಎಂದು ಎದೆ ತುಂಬಿ ಹಾಡಿದ, ಪವಿತ್ರ ಪ್ರಾಚೀನತಮ ಸಂಸ್ಕೃತಿ ಎಂದು ಬೀಗಿದ, ಭರತವರ್ಷವೆಂಬ ಈ ನೆಲದಲ್ಲಿ ಕೆಲವೇ ಕಾಲದ ಹಿಂದೆ ನಡೆದ ಘಟನೆ ಇದು. ಅಲ್ಲಿ ಮಹಿಳೆಯರನ್ನು ಹಾಡುಹಗಲಲ್ಲೇ ಎಲ್ಲರ ಎದುರು ನಿಲ್ಲಿಸಿ ಹರಾಜು ಹಾಕಲಾಯಿತು. ದೇವಕಿಬಾಯಿ, ಬಸಂತ, ಸಾವಿತ್ರಿ, ಲಕ್ಷ್ಮಿ, ಸುಶೀಲ, ಎಲ್ಲರೂ ಹಿಂದೂ ದೇವಾನುದೇವತೆಯರ ಹೆಸರನ್ನಿಟ್ಟುಕೊಂಡವರೇ! ಕೃಷ್ಣನನ್ನು ಸಾಕಿದ, ಯಮನಿಂದ ಗಂಡನ ಪ್ರಾಣ ಉಳಿಸಿಕೊಂಡ, ಸಂಪತ್ತಿಗೆ ಅಧಿದೇವತೆಯೆನಿಸಿದೆ, ದೇವಾಲಯದಲ್ಲಿ ಮೂರ್ತಿರೂಪಿಣಿಯಾಗಿ ಪೂಜೆ ಕೈಗೊಂಬ ರಾಮಾಯಣ ಮಹಾಭಾರತದ ಮಹಿಳೆಯರ ಪ್ರತಿಕೃತಿಗಳೇ ಇವರು. ಈ ಪಾಪದ ಮಹಿಳೆಯರು ಎಂದೂ ತಮ್ಮ ತಲೆಯ ಮೇಲಿನ ಸೆರಗನ್ನು ಸರಿಸಿದವರಲ್ಲ, ಕಣ್ಣೆತ್ತಿ ಪರಪುರುಷರನ್ನಿರಲಿ ಮನೆಯ ಗಂಡಸನ್ನು ನೋಡಿದವರಲ್ಲ. ಆದರೂ ಇವರನ್ನು ಹರಾಜುಹಾಕಲಾಯಿತು. ಅಂದು ತುಂಬಿದ ಇಲ್ಲಿ ಈ ಜಂಗುಳಿಯಲ್ಲಿ ನೂರಾರು ದುಶ್ಶಾಸನರಿದ್ದರು. ಸಾವಿರಾರು ಕೀಚಕರಿದ್ದರು. ಹರಾಜು ಕೂಗಲು ಹಸಿದ ಕಂಗಳ ರಾಕ್ಷಸರಿದ್ದರು. ಹರಾಜಾಗುತ್ತಿರುವ ವಸ್ತುವಿಗೆ ತಕ್ಕ ಬೆಲೆ ಬರಬೇಕು ತಾನೆ? ಅದಕ್ಕೆ ವಸ್ತುವಿನ ಗುಣಮಟ್ಟ ಮುಖ್ಯವಲ್ಲವೇ? ಹರಾಜಿನ ಕೂಗುವಿಕೆಯಲ್ಲಿ ಇಳಿಮುಖ ಕಂಡಾಗ ಈ ವಸ್ತುಗಳಿಗೆ (ಮಹಿಳೆಯರಿಗೆ) ತಮ್ಮ ಹೆಣ್ತನಗಳನ್ನು ಪ್ರದರ್ಶಿಸಲು ತಿಳಿಸಲಾಯಿತು. ಇದು ಮೊನ್ನೆ ಚುನಾವಣೆಯ ಕಾರಣ ಮಂಡ್ಯ ಜಿಲ್ಲೆಯಲ್ಲಿ ನಡೆದ ನಂಗಾನಾಚ್‌ಗಿಂತ ಕಡೆ. ಏಕೆಂದರೆ ನಂಗಾ ನಾಚ್ ಹುಡುಗಿಯರೋ ಮುಖವನ್ನೇ ಪರರಿಗೆ ತೋರದ ಮಾನಿನಿಯರು. ಆದರೂ ಹರಾಜಿಗೆ ಬಲಿಯಾದರು. ಒಬ್ಬಳು 8 ಸಾವಿರಕ್ಕೆ. ಒಬ್ಬಳು 8 ಸಾವಿರಕ್ಕೆ ಮತ್ತೊಬ್ಬಳು 5 ಸಾವಿರಕ್ಕೆ ಮಗದೊಬ್ಬಳು 7 ಸಾವಿರಕ್ಕೆ ಹೀಗೇ ಹರಾಜು ಹಾಕಿದವರ ಜೋಬುಗಳಲ್ಲಿ ಸಾವಿರಗಟ್ಟಲೆ ಹಣ ಕುಣಿಯಲು ಕಾರಣರಾದರು.

ಇದಕ್ಕೆಲ್ಲ ಕಾರಣ ನಾಗರಿಕ ಸಮಾಜ ತಲೆ ತಗ್ಗಿಸುವಂತಹುದು ಅಷ್ಟೇ ಅಲ್ಲ ಇದೇ ನೆಲದಲ್ಲಿ ಬಾಳುತ್ತಿರುವ ಪ್ರಜ್ಞಾವಂತರೆನಿಸಿಕೊಂಡವರು ಆತ್ಮಹತ್ಯೆ ಮಾಡಿಕೊಳ್ಳುವಂತಹುದು. ಈ ಹುಡುಗಿಯರು ಮಧ್ಯಪ್ರದೇಶದ ಖಾಂಡ್ಯಾ ಜಿಲ್ಲೆಯ ಹಳ್ಳಿಗಳಾದ ಅರೂಡ್, ಪಾಂಧಾನಾ, ಗೌರೀ ಮುಂತಾದ ಊರಿನವರು. ಭಿಲ್ಲ ಎನ್ನುವ ಆದಿವಾಸಿ ಬುಡಕಟ್ಟು ಜನಾಂಗದವರು. ಇವರು ಮಾಡಿದ ಅಕ್ಷಮ್ಯ ಅಪರಾಧವೇನೆಂದರೆ ಮತ್ತೊಂದು ಬುಡಕಟ್ಟು ಜನಾಂಗದ ಹುಡುಗರನ್ನು ಪ್ರೀತಿಸಿ ಮದುವೆಯಾದದ್ದು. ಇದಕ್ಕೆ ಅವರಿಗೆ ಸಿಕ್ಕ ಅಂತಿಮ ಶಿಕ್ಷೆ ಹರಾಜಿಗೆ ಒಳಪಟ್ಟಿದ್ದು ಮತ್ತು ಅವರನ್ನು ಭಿಲ್ಲ ಬುಡಕಟ್ಟು ಜನರೇ ಕೊಂಡುಕೊಂಡಿದ್ದು. ಇದನ್ನು ಈ ಮಹಿಳೆಯರು ಸಣ್ಣದಾಗಿ ಪ್ರತಿಭಟಿಸಿದಾಗ ಅವರನ್ನು ಚೂಪು ಗಲ್ಲಿನ ಮೇಲೆ ನಿಲ್ಲಿಸಲಾಯಿತು ಮತ್ತು ತಲೆಯಮೇಲೆ ದೊಡ್ಡಸೈಜುಗಲ್ಲುಗಳನ್ನು ಹೇರಲಾಯಿತು. ತಲೆ ಕೂದಲು ಕಿತ್ತಿ ಬೂಟುಕಾಲಲ್ಲಿ ಒದೆಯಲಾಯಿತು. 48 ಗಂಟೆಗಳ ಕಾಲ ನೀರು ಆಹಾರಗಳಿಲ್ಲದೆ, ಉಸಿರಾಟವೊಂದನ್ನು ಹೊರತುಪಡಿಸಿ, ಉಳಿದ್ಯಾವ ವಿಸರ್ಜನೆಗಳಿಲ್ಲದೆ ಅವರನ್ನು ನಿಲ್ಲಿಸಲಾಯಿತು. ಇದನ್ನೆಲ್ಲ ಏರ್ಪಡಿಸಿದ ಮಹಾಮಹಿಮರು ಅವರದ್ದೇ ಬುಡಕಟ್ಟಿನ ವಿಕ್ರಮ್ ಮಂಗ್ಯಮೋರೆ ಎನ್ನುವ ಸರಪಂಚ (27ವರ್ಷ), ನವಲ್‌ಸಿಂಗ್ ಎನ್ನುವ ಉಪಾಧ್ಯಾಯ, (28 ವರ್ಷ) ಮತ್ತು ಲಕ್ಷ್ಮಣ್‌ಲಾಲ್‌ಮಾಲಾ ಎನ್ನುವ ಕೊತ್ವಾಲ!

ಈ ಮಹಾಕಾರ್ಯ ನಡೆದ ದಿನ ಮತ್ತಷ್ಟು ಅದ್ದೂರಿಯ ಕಾರ್ಯಕ್ರಮ ನಡೆದವು. ಈ ಪಾಪದ ಮಹಿಳೆಯರು ಪ್ರತಿಭಟಿಸಬೇಕೆಂದು ಎತ್ತಿದ್ದ ಸಣ್ಣ ಚೀತ್ಕಾರ, ಸಣ್ಣ ಎಳೆಯ ಕಣ್ಣೀರ ಧಾರೆ, ಹಸಿವಿನ ಬಿಸಿ ಉಸಿರು ಆ ವೈಭವ ಸಮಾರಂಭದ ಪ್ರವಾಹದಲ್ಲಿ ಯಾರ ಗಮನಕ್ಕೂ ಬರದಂತೆ ಕೊಚ್ಚಿಹೋಯಿತು. ಅದೇ ದಿನ ಅದೇ 'ಗೌರಿ' ಎನ್ನುವ ಹಳ್ಳಿಯಲ್ಲಿ ಈ ಮಹಾನ್ ಹರಾಜು ನಡೆದ ಬೆನ್ನಿಗೇ ಮಧ್ಯಪ್ರದೇಶದ ಮತ್ಸ್ಯೋದ್ಯಮ ಇಲಾಖೆಯ ಮಂತ್ರಿಮಹೋದಯರಾದ ಶ್ರೀ ಹರಿಲಾಲ್ ಸಿಲಾವತ್ ಆಗಮಿಸಿದರು. ಅವರ ಆಗಮನ ಈ ಭಿಲ್ಲ ಸಮುದಾಯದ 'ಭಿಲ್ಲಸಮಾಜ ಸುಧಾರಣಾ ಸಮಿತಿ' ಯ ಕಾರ್ಯಕ್ರಮದಲ್ಲಿ ಭಾಗವಹಿಸಲು. ಈ ಭಿಲ್ಲ ಸಮುದಾಯವನ್ನು ಕಂಡು ಅತ್ಯಂತ ಹರ್ಷ ಚಿತ್ತರಾದ ಮಂತ್ರಿಮಹಾತ್ಮರು ಇವರಿಗೆ 'ಧರ್ಮಶಾಲೆ' ಯನ್ನು ಕಟ್ಟಿಸಲು ಎರಡು ಲಕ್ಷ ರೂಗಳನ್ನು ಕೊಡುವುದಾಗಿ ಭರವಸೆ ನೀಡಿದರು. ಅಷ್ಟೇ ಅಲ್ಲ ಅಲ್ಲೇ ಇದ್ದ ಪಾಂಧನ ಗ್ರಾಮದ ತಹಸೀಲ್ದಾರರಿಗೆ ಧರ್ಮಶಾಲೆಯ ಕಟ್ಟಡಕ್ಕೆ ಅಗತ್ಯವಾದ ಜಮೀನನ್ನು ಕೊಡಲು ಆಜ್ಞೆ ಸಹ ಮಾಡಿದರು. ಈ ಕಾರ್ಯಕ್ರಮ ಅದ್ದೂರಿಯಿಂದ ನಡೆಯಿತು. ಸಹಸ್ರಾರು ಜನರಿಗೆ ಭೋಜನ ವ್ಯವಸ್ಥೆಯಿತ್ತು. ಕಣ್ಣು ಕುಕ್ಕುವಂತೆ ವೇದಿಕೆ, ಬ್ಯಾನರ್‌ಗಳನ್ನು ನಿರ್ಮಿಸಲಾಗಿತ್ತು. ಇದಕ್ಕೆಲ್ಲ ಖರ್ಚು ಮಾಡಿದ ಹಣ ಆ ಪಾಪದ ಮಹಿಳೆಯರನ್ನು ಹರಾಜು ಮಾಡಿ ಗಳಿಸಿದ್ದ ಹಣ ಎನ್ನುವುದು ಸತ್ಯ ಹಾಗೂ ದುರಂತದ ಸಂಗತಿಯಾಗಿತ್ತು. ಮಂತ್ರಿ ಮಹಾಶಯರು ಭಾಷಣ ಮಾಡುತ್ತಿರುವಾಗಲೇ ಈ ಬಡಪಾಯಿ ಮಹಿಳೆಯರು ಕಣ್ಣೀರುಗರೆಯುತ್ತ ನಿಂತಿದ್ದರು. ಅಲ್ಲಿ ಭಾರಿ ಭೋಜನವಾಗುತ್ತಿರುವಾಗಲೇ 48 ಗಂಟೆಗಳಿಂದ ಉಪವಾಸವಿದ್ದ ಈ

CPMG/KA/BG-8/2003-05 RNI No. 45577/88

Posted at Basavanagudi P.O. On the 25th of every Month

ಮಹಿಳೆಯರು ಪ್ರಜ್ಞೆ ತಪ್ಪಿ ಬೀಳುತ್ತಿದ್ದರು.

ದೇವಕಿಯನ್ನು ಹಲವು ವರ್ಷದ ಹಿಂದೆ ಮದುವೆಯಾದ 'ಬರೆಲಾ' ಬುಡಕಟ್ಟಿನ ಗುಲಾಬ್ ಬಮನಿಯಾ ಈ ಘಟನೆಯನ್ನು ಖಾಂಡ್ವಾ ಡಿಸ್ಟ್ರಿಕ್ ಮ್ಯಾಜಿಸ್ಟ್ರೇಟ್‌ರಾದ ಶ್ರೀಮನು ಶ್ರೀವಾಸ್ತವರವರ ಮುಂದೆ ವಿವರವಾಗಿ ಅರುಹಿದಾಗ ಅಲ್ಲಿದ್ದವರಿಗೆಲ್ಲ ಈ ಮಾತನ್ನು ನಂಬಲೇ ಆಗಲಿಲ್ಲವಂತೆ ! ಈ ಅಪರಾಧ ಪೋಲೀಸ್ ಕಟ್ಟೆಯನ್ನೂ, ನ್ಯಾಯಾಲಯದ ಕಟಕಟೆಯನ್ನೂ ಹತ್ತಿದೆ. ಸರಿ ಆದರೆ ನಿಜವಾದ ಅಪರಾಗಳು ಶಿಕ್ಷೆಗೆ ಒಳಪಡುತ್ತಾರೆಯೇ? ಇದು ಯಕ್ಷಪ್ರಶ್ನೆ. ಏಕೆಂದರೆ, ರೂಪ್ ಕನ್ವರ್‌ಳ ಅಪರಾಧಿಗಳು, ಭಾವ್ರೀದೇವಿಯ ಅಪರಾಧಿಗಳೂ ಈ ದೇಶದಲ್ಲಿ ಶಿಕ್ಷೆಗೆ ಒಳಪಡಲಿಲ್ಲ ಅಂದಮೇಲೆ ದೇವಕಿ, ಬಸಂತಳ ಅಪರಾಧಿಗಳಿಗೂ ಶಿಕ್ಷೆ ಆಗಬಹುದು ಎನ್ನುವ ನಂಬಿಕೆ, ಈ ದೇಶದ ಮಹಿಳೆಯರಿಗೆ ಹೇಗಿರಲು ಸಾಧ್ಯ ?

ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳು ಆದಿವಾಸಿ ಜನಾಂಗಗಳಿಗಾಗಿ, ಬುಡಕಟ್ಟು ಜನಾಂಗಗಳಿಗಾಗಿ ಹಲವಾರು ಯೋಜನೆಗಳನ್ನು ಹಾಕಿಕೊಳ್ಳುತ್ತಿವೆ ಕೋಟ್ಯಾಂತರ ರೂಪಾಯಿಗಳನ್ನು ಇದಕ್ಕಾಗಿ ಖರ್ಚುಮಾಡುತ್ತಿದ್ದೇವೆಂದು ರಾಜಕಾರಣಿಗಳೂ ಮಂತ್ರಿಗಳೂ ಹೇಳುತ್ತಾರೆ ಆದರೆ ಸ್ವಾತಂತ್ರ್ಯ ಬಂದು 57 ವರ್ಷಗಳ ನಂತರವೂ ಈ ಜನಾಂಗಗಳಿಗೆ ಸಿಗಬೇಕಾದ ಪ್ರಾಥಮಿಕ ಶಿಕ್ಷಣ ದೊರೆತಿಲ್ಲ. ಇವರು ಒಂದೆಡೆ ರಾಜಕಾರಣಿಗಳ ಓಟಿನ ಬ್ಯಾಂಕುಗಳಿಗೆ ಸಿಗಬೇಕಾದ ಪ್ರಾಥಮಿಕ ಶಿಕ್ಷಣ ದೊರೆತಿಲ್ಲ ಇವರು ಒಂದೆಡೆ ರಾಜಕಾರಣಿಗಳ ಓಟಿನ ಬ್ಯಾಂಕುಗಳಾಗಿದ್ದಾರೆ ಮತ್ತೊಂದೆಡೆ ಧರ್ಮಾಂಧರಿಗೆ ಇವರನ್ನು ತಮ್ಮ ಧರ್ಮಗಳಿಗೆ ಪರಿವರ್ತಿಸುವುದರ ಸಾಧನಗಳಾಗಿದ್ದಾರೆ ಈ ವರ್ಗ ಅವಿದ್ಯೆ, ಅಜ್ಞಾನ, ಮತ್ತು ಬಡತನದಲ್ಲಿರುವಷ್ಟು ದಿನ ಇವರ ಮುಖಂಡರೆಂದು ಹೇಳಿಕೊಳ್ಳುವ ಮಂದಿಗೆ, ಇವರ ನೆಲಗಳಲ್ಲಿ ಚುನಾವಣೆಗೆ ನಿಲ್ಲುವ ರಾಜಕಾರಣಿಗಳಿಗೆ, ಇವರನ್ನು ಗುರುತಿಸಿ ಪರಿವರ್ತಿಸುವ ಧರ್ಮಾಂಧರಿಗೆ ನೆಮ್ಮದಿಯಿರುತ್ತದೆ. ಅದಕ್ಕೆ ಇವರ ಬಳಿ ವಿದ್ಯೆ, ಮತ್ತು ಜ್ಞಾನವನ್ನು ಸುಳಿಯಗೊಡುವುದಿಲ್ಲ.

ಇವೆಲ್ಲದರ ದುರಿತ ರೀತಿಯ ಸಂಕಷ್ಟಗಳಿಗೆ ಮಾತ್ರ ಮಹಿಳೆಯೇ ಗುರಿ, ಅದು ಉತ್ತಮಾತಿ ಉತ್ತಮರೆನಿಸಿಕೊಳ್ಳುವ ಮೇಲ್ವರ್ಗವಿರಲಿ, ಅಧಮರೆನಿಸುವ ಕೆಳವರ್ಗವಿರಲಿ ಬಲಿಪಶುವಾಗುವುದು ಮಹಿಳೆಯೇ! ಚುನಾವಣೆಗಳ ನಂತರ ಚುನಾವಣೆಗಳು ಘಟಿಸಿಹೋಗುತ್ತಿದ್ದರೂ ಮಹಿಳೆಗೆ 33% ಅಧಿಕಾರ ಕೊಡುವುದಿರಲಿ, ಮಂತ್ರಿ ಮಹೋದಯರ ಎದುರಲ್ಲೇ ಬಾಲ್ಯವಿವಾಹಗಳೂ, ಹೆಣ್ಣು ಹರಾಜುಗಳೂ ಘಂಟಾ ಘೋಷವಾಗಿ ನಡೆದುಹೋಗುತ್ತಿದೆಯಲ್ಲ!

ಇದು ಪ್ರಕಾಶಿಸುತ್ತಿರುವ ಭಾರತಕ್ಕೆ ಸಾಕ್ಷಿಯೇ? ○

"Achala" 108, Skyline Surabhi,
14 - P, Vidyapeeta Road,
BSK III Stage,
Bangalore - 560 085

To :

Smt/Sri